# ಕೇರಳ ಪಾಠಾವಳಿ

# KERALA READER

# ಕನ್ನಡ – ಮೂಲಪತ್ರ
# KANNADA - BT

## ತರಗತಿ

## V

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2015

JT 337-1/Kannada-5 (BT)

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by :*

**State Council of Educational Research and Training (SCERT)**
Poojappura, Thiruvananthapuram 695012, Kerala
*Website* : www.scertkerala.gov.in
*e-mail* : scertkerala@asianetindia.com
Phone : 0471 - 2341883, Fax : 0471 - 2341869
First Edition : 2014, Reprint 2015
Typesetting : SCERT
Lay out : SCERT
Cover design : SCERT
Printed at : KBPS, Kakkanad, Kochi
© Department of Education, Government of Kerala

ಒಲವಿನ ಮುದ್ದಿನ ಮಕ್ಕಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ ವಿನಯದಿಂದ ಕೂಡಿದ ಮಾತು ಎಲ್ಲರನ್ನು ಸೆಳೆಯುತ್ತದೆ. ನಮ್ಮ ಮಾತು ಕೃತಿಗಳು ನಮ್ಮ ವ್ಯಕ್ತಿತ್ವ ಚಿಂತನೆಗಳನ್ನು ಹೊರಗೆಡಹುತ್ತವೆ. ಕನ್ನಡ ನುಡಿಯು ನಮ್ಮೆಲ್ಲರ ಬಾಂಧವ್ಯವನ್ನು ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕಾಗಿದೆ. ಅದಕ್ಕಾಗಿ ನಿಮ್ಮ ಮನಸೂರೆಗೊಳಿಸುವಂತಹ ಕತೆ, ಕವಿತೆ, ನಾಟಕ, ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಈ ಪಠ್ಯಪುಸ್ತಕದಲ್ಲಿ ಕೊಡಲಾಗಿದೆ. ನಿಮ್ಮ ಆಶಯಗಳನ್ನೂ, ಭಾವನೆಗಳನ್ನೂ, ಅನುಭವಗಳನ್ನೂ ಹಂಚಿಕೊಳ್ಳಲು ಮತ್ತು ಪ್ರಕಟಿಸಲು ಈ ಪಾಠಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಇವುಗಳಲ್ಲಿರುವ ಉತ್ತಮ ಮೌಲ್ಯಗಳು ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡ ಕುಸುಮದ ಕಂಪನ್ನು ಪಸರಿಸಲು ನಾವೆಲ್ಲ ಒಂದಾಗಿ ಶ್ರಮಿಸೋಣ.

ಪ್ರೀತಿಯ ಹಾರೈಕೆಗಳೊಂದಿಗೆ,

**ಡಾ. ಎಸ್. ರವೀಂದ್ರನ್ ನಾಯರ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# TEXTBOOK DEVELOPMENT COMMITTEE

## KERALA READER - V
## KANNADA - BT

### Participants
Kunhirama, Asst.Teacher, AKMMAUP School, Paika.
Raju Stiven Crasta, Asst.Teacher, St.BASB School, Bela.
Sathyanarayana Sharma, PD Teacher, GSBS Kumbla.
Shekhara Shetty, Asst.Teacher, HAUPS Chippar.
Shreenivasa K.H., Asst.Teacher, AUPS Dharmathadka.
Shyamaprasada K., Asst.Teacher, MAUPS Kallakatta.
Veena K., HSA, GHSS Kundamkuzhi.

### Experts
Dr. Rathnakara Mallamoole, Govt. College, Kasaragod.
Shreedhara, Asst. Professor, Govt. College, Kasaragod.
Dr. Srikrishna Bhat P., Professor (Rtd), Govt. College, Kasaragod.

### External Experts
Dr. Radhakrishna N., Asst. Professor, Govt.College, Kasaragod.
Shivashankar, Asst. Professor, Govt.College, Manjeshwar.
.

### Artists
Bala Madhurakanana, Madhurakanana, Bela.
Harikrishna Bhat P., Asst. Teacher, GUPS Kasaragod.
Jyothychandran, GVHSS Karadka.
Tagore, Alappuzha.

### Academic Co-ordinator
Dr. C. Bhamini, Research Officer, SCERT, Thiruvananthapuram

---

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ 695012

# ಅನುಕ್ರಮಣಿಕೆ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| **1.** | **ಭರವಸೆಯ ಕಿರಣ** | **7–26** |
| | • ಶ್ರೇಷ್ಠ ಧರ್ಮ | |
| | • ನನ್ನ ದೇಶ ನನ್ನ ಜನ | |
| | • ನಾದಲೀಲೆ | |
| | • ಜೈ ಜವಾನ್ | |
| **2.** | **ತನು – ಮನ** | **27–40** |
| | • ಮನಸ್ಸಿದ್ದರೆ ಮಾರ್ಗ | |
| | • ಸರ್ವಜ್ಞನ ವಚನಗಳು | |
| | • ಗೆಳತಿಗೆ ಪತ್ರ | |
| **3.** | **ಆಸರೆ** | **41–58** |
| | • ನಿಸ್ವಾರ್ಥಸೇವೆ | |
| | • ಚೋಮನ ಮಕ್ಕಳು | |
| | • ಬೇಸ್ತು ಬಿದ್ದ ಕಳ್ಳರು | |


JT 337-2/Kannada-5 (BT)

# ಭಾರತದ ಸಂವಿಧಾನ

## ಭಾಗ 4(ಕ)

## ಮೂಲಭೂತ ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ. –**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಅಭಿವೃದ್ಧಿಗೊಳಿಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಸಮರ್ಪಕವಾಗಿ ಶ್ರಮಿಸುವುದು.

(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಬಾಲಕರಿಗೋ, ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.


# 1. ಭರವಸೆಯ ಕಿರಣ

ನಾವೆಲ್ಲರೂ ಭಾರತೀಯರು. ನಾವು ವಾಸಿಸುವ ಭೂಮಿ, ಉಸಿರಾಡುವ ಗಾಳಿ, ಕುಡಿಯುವ ನೀರಿಗೆ ಭೇದ ಎಲ್ಲಿದೆ? ಆದ್ದರಿಂದ ನಾವೆಲ್ಲ ಸಮಾನರು, ಈ ಮಣ್ಣು, ನೀರು, ಗಾಳಿ ನಮ್ಮದು. ಕಣ ಕಣವೂ ಭಾರತೀಯವಾದ ನಾವು ಒಗ್ಗಟ್ಟಿನಿಂದ, ಒಮ್ಮನಸ್ಸಿನಿಂದ ಒಂದಾಗಿ ಬಾಳೋಣ.

# ಶ್ರೇಷ್ಠ ಧರ್ಮ

ಎಲ್ಲ ಧರ್ಮಗಳ ಸಾರವೂ ಒಂದೇ. ಸತ್ಯವನ್ನೇ ಹೇಳಬೇಕು. ಪರರಿಗೆ ಉಪಕಾರವನ್ನು ಮಾಡಬೇಕು. ಪ್ರಾಣಿದಯಾಪರನಾಗಿರಬೇಕು. ಶ್ರದ್ಧೆಯಿಂದ ಕೆಲಸ ಮಾಡಬೇಕು. ಇತರರಿಗೆ ಗೌರವವನ್ನು ಕೊಡಬೇಕು ಇತ್ಯಾದಿ. ಆದರೆ ಅದನ್ನು ತಿಳಿದು ಕಾರ್ಯರೂಪಕ್ಕೆ ತರುವ ಮನಸ್ಸು, ವಿವೇಕ ನಮಗಿರಬೇಕು.

ಹಿಮಾಲಯದ ತಪ್ಪಲಲ್ಲಿ ಒಂದು ಗುರುಕುಲವಿತ್ತು. ಆ ಗುರುಕುಲದ ಸುತ್ತಲೂ ಸುಂದರವಾದ ತೋಟವಿತ್ತು. ವಿವಿಧ ಜಾತಿಯ ಸುಮಲತೆಗಳಿಂದ ಕೂಡಿದ ತೋಟವು ನಯನ ಮನೋಹರವಾಗಿತ್ತು. ಗುರುಗಳು ಆಶ್ರಮದ ಪರಿಸರದಲ್ಲಿದ್ದ ಲತಾಮಂಟಪದಲ್ಲಿ ಕುಳಿತು ಪಾಠ ಪ್ರವಚನ ನಡೆಸುತ್ತಿದ್ದರು. ಸುತ್ತುಮುತ್ತಲಿನ ಜನರೂ ಅಲ್ಲಿಗೆ ಸಂದೇಹ ನಿವಾರಣೆಗಾಗಿ ಬರುತ್ತಿದ್ದರು.



ಒಂದು ದಿನ ಸೂರ್ಯೋದಯದ ಹೊಂಬೆಳಕು ಆಶ್ರಮದ ತುಂಬೆಲ್ಲಾ ಹರಡಿ, ಮನಮೋಹಕವಾದ ದೃಶ್ಯವನ್ನು ನಿರ್ಮಿಸಿತ್ತು. ಆ ಸುಪ್ರಭಾತದಲ್ಲಿ ವೇದಘೋಷಗಳು ಕೇಳಿಬರುತ್ತಿದ್ದುವು. ಆ ಸಮಯಕ್ಕೆ ಸರಿಯಾಗಿ ಗುರುಗಳೂ ಲತಾಮಂಟಪಕ್ಕೆ ಬಂದರು. ಶಿಷ್ಯವೃಂದ ಎದ್ದು ನಿಂತು ಗೌರವವನ್ನು ಸೂಚಿಸಿತು. ಗುರುಗಳು ಆಸೀನರಾದ ಬಳಿಕ ಶಿಷ್ಯರೂ ಕುಳಿತರು. ಮಧ್ಯಾಹ್ನದವರೆಗೆ ಪಾಠ ಪ್ರವಚನ ಮುಂದುವರಿಯಿತು.

ಮಧ್ಯಾಹ್ನದ ವಿಶ್ರಾಂತಿಗಾಗಿ ಶಿಷ್ಯವೃಂದವನ್ನು ಕಳುಹಿಸಿದ ಗುರುಗಳು ಇನ್ನೂ ಲತಾಮಂಟಪದಲ್ಲಿ ಕುಳಿತೇ ಇದ್ದರು. ಆಗ ಆಶ್ರಮದ ಹೊರವಲಯದಲ್ಲಿ ಏನೋ ಮಾತು ಕೇಳಿಸಿತು. ಗುರುಗಳು ಎದ್ದು ಅತ್ತಕಡೆ ನಡೆದರು. ಅಲ್ಲಿ ಮೂವರು ಪರಸ್ಪರ ಜಗಳ ಮಾಡುತ್ತಿದ್ದರು. ಇದನ್ನು ಕಂಡ ಗುರುಗಳು ಅವರ ಸಮೀಪ

ಹೋದರು. ಗುರುಗಳನ್ನು ಕಂಡು ಅವರು ಜಗಳ ನಿಲ್ಲಿಸಿದರು. ಮಧ್ಯಾಹ್ನದ ಬಿಸಿಲಿಗೆ ಮೂವರೂ ದಣಿದಿದ್ದರು. ಗುರುಗಳು ಅವರನ್ನು ಆಶ್ರಮಕ್ಕೆ ಸ್ವಾಗತಿಸಿದರು. ಬಳಲಿದ್ದ ಅವರಿಗೆ ಆಹಾರ, ಪಾನೀಯಗಳನ್ನಿತ್ತು ಸತ್ಕರಿಸಿದರು. ಆ ಬಳಿಕ ಅವರಲ್ಲಿ ಜಗಳದ ಕಾರಣವನ್ನು ಕೇಳಿದರು.

ಅವರು ಮೂವರು ಬಾಲ್ಯದ ಗೆಳೆಯರಾಗಿದ್ದರು. ಮೂವರೂ ಒಟ್ಟಾಗಿ ಹಿಮಾಲಯದ ವೀಕ್ಷಣೆಗೆ ದೂರದ ಊರಿನಿಂದ ಬಂದಿದ್ದರು. ಆದರೆ ಅಂದೇಕೋ ಪರಸ್ಪರರಲ್ಲಿ ಧರ್ಮದ ಶ್ರೇಷ್ಠತೆಯ ಬಗ್ಗೆ ಚರ್ಚೆ ಉಂಟಾಗಿತ್ತು. ಮೂವರೂ ಬೇರೆ ಬೇರೆ ಧರ್ಮೀಯರಾದ್ದರಿಂದ ಪ್ರತಿಯೊಬ್ಬನಿಗೂ ತನ್ನ ಧರ್ಮವೇ ಶ್ರೇಷ್ಠ ಎನ್ನುವ ಅಹಂ! ಜ್ಞಾನವಂತರೂ, ನ್ಯಾಯವಂತರೂ ಆದ ಗುರುಗಳ ಮುಂದೆ ಅವರು ತಮ್ಮ ಜಗಳದ ಕಾರಣವನ್ನು ಹೇಳಿದರು.

"ನಿಮಗೆ ನಿಮ್ಮ ನಿಮ್ಮ ಧರ್ಮದ ಬಗ್ಗೆ ಚೆನ್ನಾಗಿ ಗೊತ್ತೇ?" ಗುರುಗಳು ಪ್ರಶ್ನಿಸಿದರು. ಆಗ ಅವರು "ಸ್ವಲ್ಪಮಟ್ಟಿಗೆ" ಎಂದು ಉತ್ತರಿಸಿದರು. ಆಗ ಗುರುಗಳು ಒಂದು ತಾಡಪತ್ರವನ್ನು ಕೈಗೆತ್ತಿಕೊಂಡರು. ಅದರಲ್ಲಿ ಈ ಕೆಳಗಿನಂತೆ ಬರೆದರು. "ಸತ್ಯವನ್ನೇ ಹೇಳು, ಮಾದಕ ವಸ್ತುಗಳ ಸೇವನೆ ನಿಷಿದ್ಧ, ಬಡವರಿಗೆ ಸಹಾಯಮಾಡು, ದೇವರು ಒಬ್ಬನೇ, ಪ್ರಾಣಿಗಳಲ್ಲಿ ದಯೆ ಇರಲಿ, ಗುರುಹಿರಿಯರನ್ನು ಗೌರವಿಸು, ದೀನ ದಲಿತರ ಸೇವೆ ಮಾಡು" ಮೂವರೂ ಕುತೂಹಲದಿಂದ ಗುರುಗಳನ್ನೇ ನೋಡುತ್ತಿದ್ದರು. ಅನಂತರ ಗುರುಗಳು ಮೂವರನ್ನು ಹತ್ತಿರ ಕರೆದರು. ಪ್ರತಿಯೊಬ್ಬರ ಕೈಬೆರಳಿನಿಂದ ಒಂದು ತೊಟ್ಟು ರಕ್ತವನ್ನು ಕೊಡಲು ತಿಳಿಸಿದರು. ಆ ರಕ್ತವನ್ನು ಒಂದೇ ರೀತಿಯ ಮೂರು ಎಲೆಗಳಲ್ಲಿ ಸಂಗ್ರಹಿಸಿದರು. ಗುರುಗಳು ಆ ಬಳಿಕ ತಾಡಪತ್ರದಲ್ಲಿ ಬರೆದ ವಾಕ್ಯಗಳನ್ನು ಓದಲು ಕೊಟ್ಟರು. ವಾಕ್ಯಗಳಲ್ಲಿರುವ ಸಂದೇಶವನ್ನು ಮೂವರೂ ನೋಡಿದರು. ಆಗ ಮೂವರು ಪರಸ್ಪರ ಮುಖ ಮುಖ ನೋಡಿಕೊಂಡರು. ಗುರುಗಳು ತಾನು ಬರೆದ ವಾಕ್ಯಗಳನ್ನು ನಿಧಾನವಾಗಿಯೂ ಗಟ್ಟಿಯಾಗಿಯೂ ಇನ್ನೊಮ್ಮೆ ಹೇಳಿದರು. "ಈ ವಾಕ್ಯಗಳಲ್ಲಿರುವ ಸಂದೇಶವು ನಿಮ್ಮ ಧರ್ಮದಲ್ಲಿ ಇದೆಯೇ? ಆ ಧರ್ಮದವರು ಎದ್ದು ನಿಲ್ಲಿ." ಆಗ ಮೂವರೂ ಎದ್ದು ನಿಂತು, "ಗುರುಗಳೇ, ತಾವು ತಾಡಪತ್ರದಲ್ಲಿ ಬರೆದ ವಾಕ್ಯಗಳು ಹೇಳುವ ಸಂದೇಶ ನಮ್ಮ ಧರ್ಮದಲ್ಲಿ ಇದೆ" ಎಂದು ಒಕ್ಕೊರಲಿನಿಂದ ಹೇಳಿದರು.

ಆಗ ಗುರುಗಳು ಮುಗುಳ್ನಗುತ್ತ, "ಮಕ್ಕಳೇ, ಇನ್ನು ನೀವು ಮಾಡಬೇಕಾದ ಕಾರ್ಯವೊಂದಿದೆ. ಆ ಪತ್ರಗಳಲ್ಲಿ ನಿಮ್ಮ ರಕ್ತವಿದೆ. ನೀವು ಬೇರೆ ಬೇರೆ ಧರ್ಮದವರಲ್ಲವೇ? ನಿಮ್ಮ ರಕ್ತ ಯಾವುದೆಂದು ಗುರುತಿಸತಕ್ಕದ್ದು ಎಂದರು. ಆಗ ಗೆಳೆಯರು ಕಕ್ಕಾಬಿಕ್ಕಿಯಾಗಿ "ಗುರುಗಳೇ, ಅದು ಹೇಗೆ ಸಾಧ್ಯ? ಎಲ್ಲ ಮನುಷ್ಯರ ರಕ್ತವೂ ಒಂದೇ ಬಣ್ಣವಲ್ಲವೇ? ಎಲೆಗಳೂ ಒಂದೇ ರೀತಿ ಇವೆ. ಹಾಗಿರುವಾಗ ಯಾವ ರಕ್ತ ಯಾರದ್ದೆಂದು ಗುರುತಿಸುವ ಬಗೆಯೆಂತು?" ಎಂದು ಕೇಳಿದರು. "ಮಕ್ಕಳೇ, ಧರ್ಮಗಳೆಲ್ಲವೂ ಸೃಷ್ಟಿಯಾದುದು ಮಾನವನ ಒಳಿತಿಗಾಗಿ, ಧರ್ಮವು ಮಾನವನನ್ನು ಸನ್ಮಾರ್ಗದಲ್ಲಿ ನಡೆಸುತ್ತದೆ. ಎಲ್ಲ ಧರ್ಮಗಳ ಸಾರವೂ ಒಂದೇ. ಅದನ್ನು ತಿಳಿದವರು ಬೇರೆ ಬೇರೆ ರೀತಿಗಳಲ್ಲಿ ಹೇಳಿದ್ದಾರೆ ಅಷ್ಟೇ. ನಮ್ಮೆಲ್ಲರ ನರನಾಡಿಗಳಲ್ಲಿ ಹರಿಯುವ ರಕ್ತವೂ ಒಂದೇ ಆದ್ದರಿಂದ ಯಾವ ಧರ್ಮವೂ ಕೀಳಲ್ಲ. ಎಲ್ಲ ಧರ್ಮಗಳೂ ಸಮಾನ. ಎಲ್ಲಾ ಧರ್ಮಗಳೂ ಶ್ರೇಷ್ಠ" ಎಂದರು ಗುರುಗಳು.

ಗುರುಗಳ ಮಾತಿನಿಂದ ಮೂವರಿಗೂ ತೃಪ್ತಿಯಾಯಿತು. ಅವರು ಗುರುಗಳಿಗೆ ವಂದಿಸಿ ತಮ್ಮ ಪ್ರಯಾಣವನ್ನು ಮುಂದುವರಿಸಿದರು.

## ಚಟುವಟಿಕೆಗಳು

### ❑ ಚರ್ಚಿಸಿರಿ

- ಹಿಂದಿನ ಕಾಲದ ಗುರುಕುಲ ಪದ್ಧತಿಯಲ್ಲಿ ವಿದ್ಯಾಭ್ಯಾಸ ಹೇಗಿದ್ದಿರಬಹುದು? ಸಹಪಾಠಿಗಳೊಂದಿಗೆ ಚರ್ಚಿಸಿರಿ.
- ನೀವೂ ನಿಮ್ಮ ಗೆಳೆಯರೊಂದಿಗೆ ಜಗಳ ಮಾಡಿದ ಸನ್ನಿವೇಶವನ್ನು ನೆನಪಿಸಿಕೊಳ್ಳಿ. ನೀವು ಜಗಳವಾಡಲು ಕಾರಣವೇನು? ಆ ಜಗಳವನ್ನು ಹೇಗೆ ತಪ್ಪಿಸಬಹುದಾಗಿತ್ತು? ಚರ್ಚಿಸಿ ತಿಳಿಯಿರಿ.

### ❑ ಉತ್ತರ ಬರೆಯಿರಿ

- ಗುರುಕುಲವು ಹೇಗಿತ್ತು?
- ಮೂವರು ಮಿತ್ರರ ಜಗಳಕ್ಕೆ ಕಾರಣವೇನು?
- ಗುರುಗಳು ತಾಡಪತ್ರದಲ್ಲಿ ಬರೆದುದೇನು?

### ❑ ಸ್ವಂತ ವಾಕ್ಯ ರಚಿಸಿರಿ

ಕೆಳಗಿನ ಗದ್ಯಭಾಗದಲ್ಲಿ ಅಡಿಗೆರೆಯೆಳೆದ ಪದಗಳನ್ನು ಬಳಸಿಕೊಂಡು ಸ್ವಂತವಾಕ್ಯ ರಚಿಸಿರಿ.

ಒಂದು ದಿನ ಬೆಳಗ್ಗೆ ನಯನ ಎಲ್ಲಿಗೋ ಹೊರಡುವ ತಯಾರಿ ನಡೆಸಿದ್ದಳು. ಅಷ್ಟರಲ್ಲಿ ಅನಿರೀಕ್ಷಿತವಾಗಿ ಅವಳ ಮಾವ ಆಗಮಿಸಿದರು. ನಯನ ಅವರನ್ನು ನಗುಮೊಗದಿಂದ ಸ್ವಾಗತಿಸಿದಳು. ಅವರಿಗೆ ಬೇಕು ಬೇಕಾದಂತೆ ಸತ್ಕರಿಸಿದಳು. ಅವಳಿಗೆ ಮಾವ ಉಡುಗೊರೆಯಾಗಿ ಒಂದು ಸುಂದರವಾದ ಕೈ ಚೀಲವನ್ನು ನೀಡಿದರು. ಮನೋಹರವಾದ ಕೈಚೀಲವನ್ನು ಕಂಡು ನಯನ ತುಂಬ ಸಂತಸಪಟ್ಟಳು. ಅಷ್ಟರಲ್ಲಿ ಹೊರಗಿನಿಂದ ವಾಹನದ ಹಾರ್ನ್ ಕೇಳಿಸಿತು. ಓಹೋ, ಕಾರು ಸಮಯಕ್ಕೆ ಸರಿಯಾಗಿ ಬಂದಿದೆ ಎನ್ನುತ್ತಾ ಎಲ್ಲರಿಂದ ಬೀಳ್ಕೊಂಡು ಮಾವ ಕಾರನ್ನೇರಿದರು. ನಯನಳಿಗೆ ಮಾವ ಬಂದುದು ತುಂಬ ತೃಪ್ತಿಯ ವಿಷಯವಾಗಿತ್ತು.

### ❑ ಸಂಭಾಷಣೆ ಬರೆಯಿರಿ

ಶ್ರೇಷ್ಠ ಧರ್ಮ ಪಾಠಭಾಗವನ್ನು ಓದಿದಿರಲ್ಲವೇ? ಇದರಲ್ಲಿ ನಿಮಗೆ ಇಷ್ಟವಾದ ಭಾಗ ಯಾವುದು? ಈ ಭಾಗದಲ್ಲಿ ಬರುವ ಪಾತ್ರಗಳು ತಮ್ಮೊಳಗೆ ನಡೆಸುವ ಮಾತುಕತೆಗಳನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ. ಅದನ್ನು ತರಗತಿಯಲ್ಲಿ ಅಭಿನಯಿಸಿರಿ.

## ❑ ಲೇಖನ ಚಿಹ್ನೆ ಬಳಸಿ ಬರೆಯಿರಿ

ಕೆಳಗೆ ಕೊಡಲಾದ ಕತೆಯನ್ನು ಓದಿ ಸೂಕ್ತವಾದ ಲೇಖನ ಚಿಹ್ನೆಗಳನ್ನು ಸೇರಿಸಿ ಪುನಃ ಬರೆಯಿರಿ.

ಕಾಡಿನಲ್ಲಿ ದಷ್ಟಪುಷ್ಟವಾದ ಒಂದು ಕುದುರೆಯಿತ್ತು ಕುದುರೆಯನ್ನು ಕಂಡು ಹುಲಿಯ ಬಾಯಲ್ಲಿ ನೀರೂರಿತು ಆಹಾ ಎಂತಹ ಅದೃಷ್ಟ ಇನ್ನು ಮೂರು ದಿನಗಳಿಗೆ ಆಹಾರ ಬೇಡ ಎಂದು ಮನದಲ್ಲೇ ಅಂದುಕೊಂಡಿತು ಹೇಗಾದರೂ ಮಾಡಿ ಕುದುರೆಯನ್ನು ಬೇಟೆಯಾಡಲು ನಿರ್ಧರಿಸಿ ಹೊಂಚು ಹಾಕಿತು ಅಷ್ಟರಲ್ಲಿ ಕುದುರೆಗೆ ಹುಲಿಯ ಬರವು ತಿಳಿಯಿತು ಅದು ಈ ಹುಲಿಯ ಕೈಯಿಂದ ಹೇಗೆ ಪಾರಾಗಲಿ ಎಂದು ಚಿಂತಿಸಿತು ಅದಕ್ಕೆ ಒಂದು ಉಪಾಯ ಹೊಳೆಯಿತು ಅದು ಕುಂಟುತ್ತಾ ಹುಲಿಯ ಬಳಿಗೆ ಸಾಗಿತು ಹುಲಿಯಣ್ಣಾ ಹುಲಿಯಣ್ಣಾ ನನ್ನ ಕಾಲಿಗೆ ಮುಳ್ಳು ತಾಗಿದೆ ತೆಗೆದು ಸಹಾಯ ಮಾಡಲಾರೆಯಾ ಎಂದು ವಿನಯದಿಂದ ಕೇಳಿತು ಹುಲಿ ಅದಕ್ಕೇನು ತೊಂದರೆ ಈಗಲೇ ತೆಗೆಯುತ್ತೇನೆ ಎನ್ನುತ್ತಾ ಕುದುರೆಯ ಹಿಂಭಾಗಕ್ಕೆ ಹೋಯಿತು ಕುದುರೆಯು ಸಿಕ್ಕಿದೆಯಾ ಕಳ್ಳ ಎಂದು ಒಮ್ಮೆಗೇ ಬಲವಾಗಿ ಒದೆಯಿತು ಒದೆತದ ರಭಸಕ್ಕೆ ಹುಲಿ ಮೂರು ಮಾರು ದೂರ ಹೋಗಿ ಬಿತ್ತು

## ❑ ಪದ ಹುಡುಕಿರಿ

ಕೆಳಗೆ ಕೊಡಲಾದ ಪದಗಳೊಳಗೆ ಹಲವಾರು ಪದಗಳು ಅಡಗಿ ಕುಳಿತಿವೆ. ಅವುಗಳನ್ನು ಹುಡುಕಿ ಬರೆಯಿರಿ. ಇದೇ ರೀತಿ ಬೇರೆ ಪದ ಬರೆದು ನೋಡಿರಿ.

ನಯನ ಮನೋಹರ    ನಯ, ................ , ...................

ನಯನ, ....................., ..................

## ❑ ವಿರೋಧಾರ್ಥ ಪದಗಳನ್ನು ಹುಡುಕಿ ಜತೆಗೊಳಿಸಿರಿ


ಒಳಿತು ನಗು ಶ್ರೇಷ್ಠ ತೃಪ್ತಿ ಧರ್ಮ ಗೌರವ ಜ್ಞಾನ ಅತೃಪ್ತಿ ಕನಿಷ್ಠ ಸತ್ಯ ಶ್ರೀಮಂತ ಬಡವ ಅಧರ್ಮ ಅಳು ಅಸ್ತಮಾನ ಅಸತ್ಯ ಅಗೌರವ ಕೆಡುಕು ಅಜ್ಞಾನ ದುರ್ಮಾರ್ಗ

# ನನ್ನ ದೇಶ ನನ್ನ ಜನ

ತಾಯ್ನಾಡಿನ ಋಣ ಸಲ್ಲಿಸಲು ಒಂದು ಜನ್ಮ ಸಾಲದು. ನಮಗೆ ದೊರಕುವ ಅಲ್ಪ ಸಮಯದಲ್ಲಿ ನಾಡಿನ ರಕ್ಷಣೆಗೆ ನಾವು ನಮ್ಮ ಪ್ರಾಣವನ್ನೇ ಪಣವಾಗಿಟ್ಟು ಹೋರಾಡಬೇಕು. ದೇಶದ ಉಜ್ವಲ ಭವಿಷ್ಯಕ್ಕಾಗಿ ಎಲ್ಲರನ್ನು ಒಗ್ಗೂಡಿಸಿಕೊಂಡು ಮುನ್ನಡೆಯಬೇಕು. ಸರ್ವ ಗುಣಸಂಪನ್ನ ದೇಶ ನಮ್ಮದಾಗಲಿ.

ನನ್ನ ದೇಶ ನನ್ನ ಜನ
ನನ್ನ ಮಾನ ಪ್ರಾಣ ಧನ
ತೀರಿಸುವೆನೆ ಅದರ ಋಣ
ಈ ಒಂದೆ ಜನ್ಮದಿ
ಕೆಂಪು ನೆಲದ ಹಸಿರು ಬೆಳೆ
ಕಪ್ಪು ಮಣ್ಣ ಮೊಗದ ಕಳೆ
ಸೂರ್ಯ ಚಂದ್ರ ಚಿಕ್ಕೆಗಳೇ
ನಮ್ಮ ಹಿರಿಯ ಒಕ್ಕಲು
ನೂರು ಭಾವ ಭಾಷೆ ನೆಲೆ
ನೂರು ಬಣ್ಣ ವೇಷ ಕಲೆ
ಸ್ವಚ್ಛಂದದ ಹಕ್ಕಿಗಳೆ
ನಮ್ಮ ಹಾಡು ಬದುಕಲು
ಪ್ರಾಚೀನವ ತಿಕ್ಕಿತೊಳೆ
ವರ್ತಮಾನ ಜೀವಕಳೆ
ಉಕ್ಕೇರಲಿ ಬಾಳ ಹೊಳೆ
ಆ ಭವಿಷ್ಯದೊಡಲಿಗೆ
ಮೈಕೊಡವಿದೆ ಮೂಕಜನ
ಕೈ ಹಿಡಿಯಿರಿ ನಾಕು ಚಣ
ಎದ್ದೇಳಲಿ ಎಲ್ಲಗುಣ
ಆ ಸಮೃದ್ಧ ಬಾಳಿಗೆ

ಚೆನ್ನವೀರ ಕಣವಿ



## ❑ ಹಾಡಿರಿ

- ನನ್ನದೇಶ ನನ್ನಜನ ಕವನವನ್ನು ರಾಗ, ತಾಳ, ಲಯಬದ್ಧವಾಗಿ ಹಾಡಿರಿ.

## ❑ ಚರ್ಚಿಸಿರಿ

- ನಮ್ಮ ದೇಶದ ಋಣವನ್ನು ತೀರಿಸುವುದು ಹೇಗೆ? ಚರ್ಚಿಸಿರಿ.

## ❑ ಉತ್ತರ ಬರೆಯಿರಿ

- ನಮ್ಮ ದೇಶ ವೈವಿಧ್ಯಪೂರ್ಣವಾಗಿದೆ ಎಂದು ಕವಿಗಳು ಹೇಳಲು ಕಾರಣವೇನು?

## ❑ ಸಾಲು ಗುರುತಿಸಿರಿ

- ಈ ಕೆಳಗಿನ ಆಶಯವಿರುವ ಸಾಲುಗಳನ್ನು ಪದ್ಯದಿಂದ ಗುರುತಿಸಿ ಬರೆಯಿರಿ.
  - ನನ್ನ ದೇಶ ಮತ್ತು ದೇಶದ ಜನರು ನನ್ನ ಪ್ರಾಣವೂ, ಮಾನವೂ, ಘನತೆಯೂ ಆಗಿದ್ದಾರೆ.
  - ಕಪ್ಪು ಮಣ್ಣಿನಲ್ಲಿ, ಕೆಂಪು ನೆಲದಲ್ಲಿ ನಮ್ಮ ಜನರು ಸಮೃದ್ಧವಾಗಿ ಕೃಷಿ ಮಾಡಿದ್ದಾರೆ.
  - ನಮ್ಮಲ್ಲಿ ನೂರಾರು ಭಾಷೆ, ಬಣ್ಣ, ಕಲೆ, ಭಾವನೆಗಳಿವೆ.
  - ಪ್ರಾಚೀನ ಕಾಲದಿಂದ ಅಂಟಿಕೊಂಡಿರುವ ಕೊಳೆಯನ್ನು ಹೋಗಲಾಡಿಸಿ ವರ್ತಮಾನಕ್ಕೆ ಜೀವಕಳೆ ತುಂಬಬೇಕು.
  - ಇದುವರೆಗೆ ಮೌನವಾಗಿ ಮಲಗಿದ್ದ ಜನರೆಲ್ಲ ಎಚ್ಚೆತ್ತು ಒಗ್ಗಟ್ಟಾಗಿದ್ದಾರೆ.

## ❑ ಹೋಲಿಸಿರಿ

ಕೆಳಗಿನ ಪದ್ಯವನ್ನು 'ನನ್ನದೇಶ ನನ್ನಜನ' ಪದ್ಯದೊಂದಿಗೆ ಹೋಲಿಸಿ ಸಾಮ್ಯವ್ಯತ್ಯಾಸ ಬರೆಯಿರಿ.

### ಬನ್ನಿ ಸೋದರರೆ ಬನ್ನಿ

ಬನ್ನಿ ಸೋದರರೆ ಬನ್ನಿ ಬಾಂಧವರೆ
ಹೃದಯ ಹೃದಯಗಳ ಬೆಸೆಯೋಣ
ವಸುಧಾ ಕುಟುಂಬ ರಚಿಸೋಣ
ಮೊಳಗಲಿ ತಾಯ ಯಶೋಗಾನ
ಭಾರತೀ ಜಯ ಭಾರತೀ ॥೧॥

ಹಸಿವಡಗಲಿ ತೃಷೆ ಹಿಂಗಲಿ
ಅಜ್ಞಾನದ ಪೊರೆ ಹರಿಯಲಿ
ರೋಗ ರೂಢಿಗೊದಗಲಿ ಅವಸಾನ
ಸುತರೆಮಗಿದು ಕರ್ತವ್ಯಪಣ
ಧರೆ ಎನಿಸಲಿ ಆನಂದವನ ॥೨॥

ಕೊರತೆ ಕಲುಷಗಳ ನಳೆದಳೆದು
ಸರಿಯುತ್ತರ ಸುರಿಮಳೆಗರೆದು
ಸರ್ವವ್ಯಾಪಿಯಾಗಲಿ – ಸಂಕ್ರಮಣ
ಸಂಘಟನಾ ಬಲ ನಿರ್ಮಾಣ
ವಿಶ್ವಸಂತತಿಯ ಕಲ್ಯಾಣ ॥೩॥

ಡಾ. ಎಸ್. ನಾರಾಯಣ ಭಟ್ಟ

## ❑ ಸಂಗ್ರಹಿಸಿರಿ

- ದೇಶಭಕ್ತಿ ಗೀತೆಗಳನ್ನು ಸಂಗ್ರಹಿಸಿ ಹಾಡಿರಿ.

# ನಾದಲೀಲೆ

ನಾವೆಷ್ಟೋ ಕನಸುಗಳನ್ನು ಕಾಣುತ್ತೇವೆ, ಮರೆತೂ ಬಿಡುತ್ತೇವೆ. ಕಂಡ ಕನಸನ್ನು ಛಲಹಿಡಿದು ಸಾಧಿಸಿದವರು ವಿರಳ. ಆ ಕನಸನ್ನು ನನಸಾಗಿಸಿದವರು ನಮಗೆ ಆದರ್ಶಪ್ರಾಯರು. ಪ್ರಾಮಾಣಿಕತೆ, ಪರಿಶ್ರಮ, ಆತ್ಮವಿಶ್ವಾಸದ ಅವರ ಜೀವನದ ರೀತಿ ನೀತಿ ನಮಗೆ ಅನುಕರಣೀಯವಾಗುತ್ತದೆ. ಅವರ ಮಾತು ನಮ್ಮ ಸಾಧನೆಗೆ ಪ್ರೋತ್ಸಾಹಕವಾಗುತ್ತದೆ.

ಟಿಂಗ್ ! ನನ್ನ ತಲೆಯೊಳಗೆ ನೂರು ವ್ಯಾಟಿನ ಬಲ್ಬ್ ಬೆಳಗಿತು. ಮಲೆಯಾಳಂ ನಿರ್ದೇಶಕರೊಬ್ಬರು ಪತ್ರಿಕೆಯಲ್ಲಿ ತಮ್ಮ ಚಲನಚಿತ್ರಕ್ಕೆ 'ಬಾಲ ಕಲಾವಿದರು ಬೇಕಾಗಿದ್ದಾರೆ' ಎಂದು ಜಾಹೀರಾತು ನೀಡಿದ್ದರು. ಆಸಕ್ತಿಯಿರುವ ಮಕ್ಕಳು ತಮ್ಮ ವಿವಿಧ ಭಾವ ಭಂಗಿಗಳ ಚಿತ್ರಗಳನ್ನು ಕಳುಹಿಸಬೇಕಿತ್ತು. ನಾನಂತೂ ಅಂದಿನ ದಿನಗಳಲ್ಲಿ ಸಿನಿಮಾದಲ್ಲಿ ಕಾಣಬಹುದಾದ ನನ್ನನ್ನು ಕಲ್ಪಿಸಿಕೊಂಡು ಅದರ ಗುಂಗಿನಲ್ಲೇ ಮುಳುಗಿ ಬಿಡುತ್ತಿದ್ದೆ. ನನ್ನನ್ನು ನೋಡಿದ ಯಾರು ಬೇಕಾದರೂ ಇದನ್ನು ಗುರುತಿಸಬಹುದಿತ್ತು. ನನ್ನ ಅಣ್ಣ ಕೊಚ್ಚು ಮೋನ್ ಅಂತೂ, "ಮುಖಕ್ಕೆ ಗಾಯ ಮಾಡಿಕೊಳ್ಳಬೇಡ, ನೀನು ಸಿನಿಮಾದಲ್ಲಿ ನಟಿಸಲಿಕ್ಕಿದೆ" ಎಂದು ಪದೇ ಪದೇ ಎಚ್ಚರಿಸುತ್ತಿದ್ದ. ಇದೇ ಅಣ್ಣ ಅವಕಾಶ ಸಿಕ್ಕರೆ ನನ್ನನ್ನು ನೆಲಕ್ಕೆ ಅಪ್ಪಳಿಸಿ ಬಡಿಯುತ್ತಲೂ ಇದ್ದ. ಆದರೆ ನಾನು ಸಿನಿಮಾದಲ್ಲಿ ನಟಿಸುವ ಸಾಧ್ಯತೆಯನ್ನು ತಿಳಿದೇ ಸ್ವಲ್ಪ ಮೆತ್ತಗಾಗಿದ್ದ. ನಾನು ಇದು ದೇವರೇ ನನಗೊದಗಿಸಿದ ಸುವರ್ಣಾವಕಾಶವೆಂದು ಭಾವಿಸಿದೆ. ಉಮ್ಮನ ಕಾಲುಹಿಡಿದು ಅತ್ತು ಕರೆದೆ. ಹಾಗೂ ಹೀಗೂ ಫೋಟೊ ತೆಗೆಸಿದ್ದಾಯಿತು. ಆ ಕಾಲಕ್ಕೆ ಅದರ ಖರ್ಚು ನೂರೈವತ್ತು ರೂಪಾಯಿಗಳಾಗಿತ್ತು. ಅಂತೂ ಇಂತೂ ನನ್ನ ಫೋಟೊ ಕಳುಹಿಸಿದ್ದಾಯಿತು. ಕೊನೆಗೊಂದು ದಿನ ಆ ಸುದ್ದಿ ಬಂದೇಬಿಟ್ಟಿತು. ಆ ಚಿತ್ರಕ್ಕೆ ಮತ್ಯಾರೋ ಹುಡುಗ ಆಯ್ಕೆಯಾಗಿದ್ದ. ನಾನು ದುಃಖದ ಕಡಲಲ್ಲಿ ಮುಳುಗಿದೆ. ಏನೂ ತಿನ್ನದೆ ಯಾವುದರಲ್ಲೂ ಆಸಕ್ತಿಯಿಲ್ಲದೆ ಕುಳಿತ ನನ್ನನ್ನು ನೋಡಿದ ನನ್ನ ಎರಡನೇ ಭಾವ "ನೀನು ಯೋಚನೆ ಮಾಡಬೇಡ. ನಿನ್ನನ್ನು ಒಂದು ದಿನ ನಾವು ಪೂನಾ ಫಿಲ್ಮ್



ಇನ್ಸ್ಟಿಟ್ಯೂಟ್‌ಗೆ ಕಳುಹಿಸುತ್ತೇವೆ" ಎಂದರು. ಆ ವಿಚಿತ್ರ ಹೆಸರು ಹೀಗೆ ನನ್ನ ತಲೆಯೊಳಗೆ ಶಾಶ್ವತವಾಗಿ ನಿಂತು ಬಿಟ್ಟಿತು.

ನನ್ನ ತಂದೆ ಫಳಯ ತೆರುವಿಲ್ ತಂಬಿಕುಂಞಿ ಪೂಕುಟ್ಟಿ, ತಾಯಿ ಆಲಿಕುಂಞಿ ನಫೀಸಾ ಬೀಬಿ. ತಂದೆ ಪ್ರೈವೇಟ್ ಬಸ್ಸುಗಳಲ್ಲಿ ಟಿಕೇಟ್ ಪರೀಕ್ಷಕರಾಗಿ ದುಡಿಯುತ್ತಿದ್ದರು. ತಾಯಿ ಕೃಷಿ ಹಿನ್ನೆಲೆಯವರಾಗಿದ್ದರು. ನಾನು ಹುಟ್ಟಿದ್ದು ಕೊಲ್ಲಂ ಜಿಲ್ಲೆಯ ಪುನಲೂರು ಸಮೀಪದ ವಿಳಕ್ಕುಪಾರ ಎಂಬ ಹಳ್ಳಿಯಲ್ಲಿ. ನನಗೆ ಬಾಪಾನ ಪ್ರಾಮಾಣಿಕತೆ, ಉಮ್ಮನ ಪರಿಶ್ರಮದ ದುಡಿಮೆ ಎರಡೂ ಬಳುವಳಿಯಾಗಿ ಬಂದಿವೆ.

ನನ್ನ ಬಾಲ್ಯದ ವಿದ್ಯಾಭ್ಯಾಸವೆಲ್ಲ ಕೊಲ್ಲಂ ಜಿಲ್ಲೆಯಲ್ಲೇ ನಡೆಯಿತು. ಬಿಎಸ್ಸಿ ಪದವಿ ಮುಗಿಸಿದ ಮೇಲೆ ಭೌತಶಾಸ್ತ್ರದಲ್ಲಿ ಎಂ.ಎಸ್‌ಸಿ. ಗೆ ಸೇರಬೇಕು; ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆಯಬೇಕು ಎಂದು ಆಸೆಯಿತ್ತು. ಆದರೆ ನನಗೆ ಸೀಟು ಸಿಗಲಿಲ್ಲ. ಡೊನೇಶನ್ ಕೊಟ್ಟು ಸೇರುವುದು ಬಾಪಾನ ಅಂತಃಸಾಕ್ಷಿಗೆ ಒಪ್ಪದ ವಿಚಾರ. ಹಾಗಾಗಿ ಕಾನೂನು ಕಲಿಯಲು ತೀರ್ಮಾನಿಸಿದೆ. ಒಟ್ಟಿನಲ್ಲಿ ಸುಮ್ಮನೆ ಕುಳಿತು ಕಾಲ ಕಳೆಯಲು ಸಿದ್ಧನಿರಲಿಲ್ಲ. ಸಾಲದ್ದಕ್ಕೆ ಕಾನೂನು ಕಲಿತರೆ ಒಂದು ವೃತ್ತಿಯಂತೂ ಗ್ಯಾರಂಟಿ. ಇಂತಹ ಸನ್ನಿವೇಶದಲ್ಲಿ ನನ್ನ ಗೆಳೆಯರು ಪತ್ರಿಕೆಯಲ್ಲಿ ಬಂದಂಥ ಜಾಹೀರಾತೊಂದನ್ನು ನನಗೆ ತೋರಿಸಿದರು. ಅದರಲ್ಲಿ "ಪೂನಾದ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಸೌಂಡ್ ಇಂಜಿನಿಯರಿಂಗ್ ಕೋರ್ಸ್ ಇದೆ, ಅದಕ್ಕೆ ಬೇಕಾದ ಅರ್ಹತೆ ಎಂದರೆ ಭೌತಶಾಸ್ತ್ರದಲ್ಲಿ ಪದವಿ" ಎಂದು ಪ್ರಕಟಿಸಲಾಗಿತ್ತು.

ಟಿಂಗ್! ನನ್ನ ತಲೆಯೊಳಗೆ ಮತ್ತೊಮ್ಮೆ ನೂರು ವ್ಯಾಟ್‌ನ ಬಲ್ಬ್ ಬೆಳಗಿತು. ಬಾಲಕನಾಗಿದ್ದಾಗ ನನಗಿದ್ದ ಸಿನಿಮಾ ಹುಚ್ಚು ಮತ್ತೆ ಮರುಕಳಿಸಿತು. ನಾನು ಅಖಿಲ ಭಾರತಮಟ್ಟದ ಪ್ರವೇಶ ಪರೀಕ್ಷೆ ಬರೆದು ಪ್ರವೇಶ ವನ್ನೂ ಗಿಟ್ಟಿಸಿದೆ. ಆದರೆ ಈ ಸಂತೋಷ ತುಂಬ ಸಮಯ ಉಳಿಯಲಿಲ್ಲ. ಏಕೆಂದರೆ ಆಯ್ಕೆಯ ಪ್ರಕ್ರಿಯೆ ಇನ್ನು ಮುಗಿದಿರಲಿಲ್ಲ. ಪ್ರವೇಶ ಪರೀಕ್ಷೆ ಮೊದಲ ಹಂತವಾಗಿತ್ತು. ಎರಡನೇ ಹಂತದ ಪರೀಕ್ಷೆ, ಸಂದರ್ಶನಗಳು ಪೂನಾದಲ್ಲಿಯೇ ನಡೆಯುತ್ತಿದ್ದುವು. ನನ್ನ ಕಾನೂನು ಕಾಲೇಜಿನ ಪ್ರಾಂಶುಪಾಲರ ಕಾಲುಹಿಡಿದು ವಿದ್ಯಾರ್ಥಿ ಕೋಟಾದಲ್ಲಿ ರೈಲು ಟಿಕೇಟಿಗೆ ಸರ್ಟಿಫಿಕೇಟು ಕೊಡಿ ಎಂದು ಕೇಳಿದೆ. ಆಗ ಪೂನಾಕ್ಕೆ ಟಿಕೇಟು ದರ ಮುನ್ನೂರು ರೂಪಾಯಿ. ಅದು ದೊರೆಗಳಷ್ಟೆ ಕೊಡಬಹುದಾಗಿದ್ದ ಮೊತ್ತ. ಮನೆಯಲ್ಲಂತೂ ಅಷ್ಟು ಹಣ ಹೊಂದಿಸುವುದು ಸಾಧ್ಯವೇ ಇರಲಿಲ್ಲ. ಪ್ರಿನ್ಸಿಪಾಲರ ದಯೆಯಿಂದ ವಿದ್ಯಾರ್ಥಿ ರಿಯಾಯಿತಿ ದರ ನೂರಮೂವತ್ತೈದು ರೂಪಾಯಿ ಟಿಕೇಟು ನನಗೆ ದೊರಕಿತು. ಅವರಿವರನ್ನು ಕಾಡಿಬೇಡಿ ಹೇಗೋ ಹಣ ಹೊಂದಿಸಿ ನಾನು ಪೂನಾಕ್ಕೆ ಹೋಗುವ ಜಯಂತಿ ಜನತಾ ಎಕ್ಸ್‌ಪ್ರೆಸ್ ರೈಲು ಹತ್ತಿದೆ.

ನಾನು ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ಕೇರಳದ ಗಡಿ ದಾಟುತ್ತಿದ್ದೆ. ನನಗಂತೂ ರೈಲಿನಲ್ಲಿ ದೂರ ಪ್ರಯಾಣದ ವೇಳೆ ಏನು ಮಾಡಬೇಕು ಅಥವಾ ಏನು ಮಾಡಬಾರದು ಎಂಬುದರ ಕಲ್ಪನೆಯೂ ಇರಲಿಲ್ಲ. ರೈಲಿನಲ್ಲಿ ಊಟ ತಿಂಡಿಗೇನೂ ಕೊರತೆ ಇರಲಿಲ್ಲ. ಅದೃಷ್ಟವಶಾತ್ ತಿರುವನಂತಪುರದ ಮಹೇಶ್, ಕೊಲ್ಲಂನ ಹರಿ ಜತೆಯಾದರು. ಮಹೇಶ್ ಅನುಭವಿ ಪ್ರಯಾಣಿಕ, ಆದರೆ ಗಂಭೀರ ಮನುಷ್ಯ, ಮಾತು ಕಡಿಮೆ. ಹರಿ ಮಾತುಗಾರ ಎನ್ನುವುದು ನನಗೆ ಸಂತೋಷವನ್ನು ಕೊಟ್ಟಿತು. ನಾವು ಪೂನಾಕ್ಕೆ ತಲುಪಿದಾಗ ಬೆಳಗಿನ ಜಾವ ಎರಡು ಗಂಟೆ. ಭಯಂಕರ ಚಳಿಯಿತ್ತು. ರೈಲಿನಿಂದ ಇಳಿದ ತಕ್ಷಣ ಮಹೇಶ್ ನಮ್ಮನ್ನು ವೈಟಿಂಗ್ ರೂಮಿಗೆ ಕರೆದೊಯ್ದ. ಒಂದು ಮೂಲೆಯಲ್ಲಿ ಸ್ಥಳ ಹುಡುಕಿ ನಿದ್ರೆ ಹೋಗಿಬಿಟ್ಟ. ನಾನಂತೂ ಸ್ವೆಟರ್ ಧರಿಸಿಕೊಂಡು ಬೆಳಗಾಗುವುದನ್ನೇ ಕಾಯುತ್ತಾ ಕುಳಿತೆ. ಅಲ್ಲಿ ಕಂಡ ಜನಸಾಗರ ನನ್ನ ನಿದ್ದೆಯನ್ನು ಓಡಿಸಿ ಬಿಟ್ಟಿತು.

ಆ ಹೊತ್ತಿಗೆ ಒಬ್ಬ ಕುಳ್ಳಗಿನ ಸುಂದರ ಯುವಕ ವೈಟಿಂಗ್ ರೂಮಿಗೆ ಬಂದ. ಆತನ ಪ್ರವೇಶವೇ ಅವನ ಆತ್ಮವಿಶ್ವಾಸವನ್ನು ತೋರಿಸುತ್ತಿತ್ತು. ಮೂಲೆಯಲ್ಲಿ ಕುಳಿತು ಅವನನ್ನು ನೋಡುತ್ತಿದ್ದ ನನ್ನನ್ನು ಕಂಡದ್ದೇ ತಡ, ಸೀದಾ ನನ್ನ ಬಳಿಗೆ ಬಂದ. ನಾನು ರಾಮನ್ ಎಂದು ಪರಿಚಯಿಸಿಕೊಂಡ. ಅಚ್ಚರಿಯೆಂದರೆ ಅವನೂ ಮಲೆಯಾಳಿಯಾಗಿದ್ದ. ನನಗಂತೂ ಕೆಲವೇ ನಿಮಿಷಗಳಲ್ಲಿ ಇಷ್ಟವಾಗಿ ಹೋದ. ಮುಂದೆ ನಾವು ಬಹಳ ಹತ್ತಿರದ ಗೆಳೆಯರಾದೆವು. ಅವನೂ ಅಲ್ಲಿ ಕ್ಯಾಮರಾ ಬಳಸಲು ಬೇಕಿರುವ ಎಲ್ಲವನ್ನು ಕಲಿಯುವುದಕ್ಕಾಗಿ ಬಂದಿದ್ದ. ಈಗ ಅದಕ್ಕೆ 'ಸಿನಿಮಾಟೋಗ್ರಫಿ' ಎನ್ನುತ್ತಾರೆ. ರಾಮನ್‌ಗೆ ಹಿಂದಿ ಬರುತ್ತಿತ್ತು. ಅವನೇ ನಮ್ಮ ಗುಂಪಿಗೆ ನಾಯಕನೂ ಆದ. ನಾವೆಲ್ಲರೂ ಅವನ ಸಹಾಯದಿಂದ ಸುಲಭವಾಗಿ ಇನ್‌ಸ್ಟಿಟ್ಯೂಟ್‌ಗೆ ತಲಪಿದೆವು. ನಾನು ರಬ್ಬರ್ ಚಪ್ಪಲಿ ಹಾಕಿಕೊಂಡು ಒರಟು ಕಾಲಿನಲ್ಲಿ ಹೆಜ್ಜೆಯಿಡುತ್ತಿರುವ ಈ ದಾರಿಯಲ್ಲಿ ಎಂಥೆಂಥ ಮಹನೀಯರು ನಡೆದಿದ್ದಾರೆ! ಈ ಹಾದಿಯಲ್ಲಿ ನಾನಿಟ್ಟ ಮೊದಲ ಹೆಜ್ಜೆಗಳನ್ನು ನಾನು ಯಾವತ್ತೂ ಮರೆಯಲು ಸಾಧ್ಯವಿಲ್ಲ.

ಮೊದಲ ದಿನ ನಾನು ಮತ್ತು ಹರಿ ಊಟಕ್ಕೆ ಹೊರಗೆ ಹೋದೆವು. ನನ್ನ ಮತ್ತು ಹರಿಯ ಹಿಂದಿ ಜ್ಞಾನ ದೊಡ್ಡ ಸೊನ್ನೆ ಮಾತ್ರ. ಮೆನು ಓದಿದರೂ ಅರ್ಥವಾಗಲಿಲ್ಲ. ಆಲೂ–ಗೋಬಿಯಂಥ ಪದಗಳು ನಮ್ಮ ನಿಘಂಟಿನಲ್ಲಿ ಇರಲೇ ಇಲ್ಲ. ಇಂಗ್ಲೀಷ್‌ನಲ್ಲಿ ಕೇಳಲು ಪ್ರಯತ್ನಿಸಿದರೂ ಫಲ ನೀಡಲಿಲ್ಲ. ಹಾಗೂ ಹೀಗೂ ಊಟ ಮುಗಿಸಿದರೆ ಎರಡು ಬಟ್ಟಲುಗಳಲ್ಲಿ ನಿಂಬೆ ಹಣ್ಣಿನ ಹೋಳು ತೇಲುತ್ತಿದ್ದ ನೀರು ಬಂತು. ಇದು ನಿಂಬೆ ಜ್ಯೂಸ್ ಇರಬೇಕೆಂದು ಕುಡಿಯಲು ತೀರ್ಮಾನಿಸಿದೆವು. ಆದರೆ ನಿಂಬೆ ಹಣ್ಣಿನ ಪಾನಕವನ್ನೇಕೆ ಬಿಸಿ ಮಾಡುತ್ತಾರೆ ಎಂಬ ಸಂಶಯ ಕಾಡಿತು. ಅನುಮಾನದಿಂದ ಅಕ್ಕಪಕ್ಕ ನೋಡಿದರೆ ಅಲ್ಲಿದ್ದವರು ನಮಗೆ ಹಿಂದಿಯಲ್ಲಿ ಸಲಹೆಗಳ ಮಳೆ ಸುರಿಸಿದರು. ನಮಗೆ ಒಂದಕ್ಷರವೂ ತಿಳಿಯಲಿಲ್ಲ. ಆದರೆ ನಮ್ಮ ಸುತ್ತಲಿನ ಮನುಷ್ಯರು ಈ ನಿಗೂಢ ಶರಬತ್ತನ್ನು ಕುಡಿಯುತ್ತಿಲ್ಲ ಎಂಬುದು ನನ್ನ ಗಮನಕ್ಕೆ ಬಂತು. ಅವರೆಲ್ಲ ತಮ್ಮ ಬೆರಳುಗಳನ್ನು ಈ ಬಟ್ಟಲುಗಳಲ್ಲಿ ತೊಳೆಯುತ್ತಿದ್ದರು!

ಕೊನೆಗೂ ನಮ್ಮೆದುರು ಇದ್ದ ಬಟ್ಟಲುಗಳ ರಹಸ್ಯ ತಿಳಿಯಿತು. ಆದರೆ ಉಂಡು ಸರಿಯಾಗಿ ಕೈ ಬಾಯಿ ತೊಳೆಯದ ಇವರೆಂಥಾ ಮನುಷ್ಯರು ಎಂದು ಎನಿಸಿದ್ದಂತೂ ನಿಜ.

ಮಾರನೇ ದಿನ ಸಂದರ್ಶನ ನಡೆಯಿತು. ಸಂದರ್ಶನದಲ್ಲಿ ಏನು ಮಾಡಬೇಕೆಂದು ನನಗೆ ತಿಳಿದಿರಲಿಲ್ಲ. ಹೇಗಾದರೂ ಮಾಡಿ ಪ್ರವೇಶ ಪಡೆಯಬೇಕು ಎಂದು ಮಾನಸಿಕವಾಗಿ ಸಿದ್ಧನಾಗಿದ್ದೆ. ಆದರೆ ನನ್ನ ಉದ್ದೇಶ ಸಫಲವಾಗಲಿಲ್ಲ. ನನಗೆ ಪ್ರವೇಶ ದೊರಕಲಿಲ್ಲ. ನನಗೆ ದುಃಖವಾದರೂ ಇಡೀ ಪ್ರಕ್ರಿಯೆಗಳ ಬಗ್ಗೆ ಯೋಚಿಸಿದೆ."ಸೋಲಿನ ಭೀತಿಯಲ್ಲಿ ಏನೇನೋ ಮಾಡುವುದಲ್ಲ. ಸರಳವಾಗಿ ಆ ಕ್ಷಣದಲ್ಲಿ ಅನಿಸಿದ್ದನ್ನು ಮಾಡಬೇಕು" ಎಂದು ನಂಬಿದೆ. ನಾನೇನಾದರೂ ಮಾಡಿದರೆ ಇದನ್ನು ಮಾತ್ರ ಎಂಬ ತೀರ್ಮಾನದೊಂದಿಗೆ ಮನೆಗೆ ಹಿಂದಿರುಗಿದೆ. ಸದ್ದಿಲ್ಲದೆ ನನ್ನ ಕಾನೂನು ಶಿಕ್ಷಣವನ್ನು ಮುಂದುವರಿಸಿದೆ.

ಮುಂದಿನ ವರ್ಷ ಎರಡನೇ ಬಾರಿಗೆ ಸಂದರ್ಶನಕ್ಕೆ ಹೋಗುವಾಗ ರಾಮನ್ ಮತ್ತು ನಾನು ಜೊತೆಗೆ ಪ್ರಯಾಣ ಮಾಡಿದೆವು. ಈ ಬಾರಿ ನಾನು ಅನುಭವಿಯಾಗಿದ್ದ ಕಾರಣ ಹಿಂದಿನ ಗಾಬರಿ, ಉದ್ವೇಗಗಳಿರಲಿಲ್ಲ. ಚೆನ್ನಾಗಿಯೇ ತಯಾರಿ ನಡೆಸಿದ್ದೆ. ಮಧ್ಯಾಹ್ನ ಊಟ ಮುಗಿಸಿ ಟೀ ಕುಡಿಯುತ್ತಿದ್ದಾಗ ನನಗೆ ಸಂದರ್ಶನಕ್ಕೆ ಕರೆಬಂತು. ಯಾರೋ ಒಬ್ಬರು ಮುಗುಳ್ನಗೆಯೊಂದಿಗೆ "ಮತ್ತೆ ಇಲ್ಲಿಗೇಕೆ ಬಂದಿರಿ?" ಎಂದು ಪ್ರಶ್ನಿಸಿದರು.

"ನೀವೇ ನನ್ನನ್ನು ಬಾ ಎಂದು ಕರೆದಿರಿ."

"ಓಹೋ.... ಚೆನ್ನಾಗಿದೆ. ಒಂದು ವೇಳೆ ನಿಮಗೆ ಸೀಟು ಸಿಗದಿದ್ದರೆ?"

"ಖಂಡಿತ ಸಿಗುವುದೆಂಬ ವಿಶ್ವಾಸವಿದೆ."

ಮತ್ತೆ ಅವರು ಕೇಳಿದರು. "ನಾನು ನಿನ್ನನ್ನು ಫೇಲ್ ಮಾಡಿದರೆ?"

"ಸರಿ. ಬೋರ್ಡ್‌ನಲ್ಲಿ ಇನ್ನು ಏಳು ಮಂದಿ ಇದ್ದಾರೆ. ಅವರೆಲ್ಲಾ ನಾನು ಬೇಕು ಎಂದರೆ ಏನಾಗುತ್ತೆ?" ನಾನು ಮರುಪ್ರಶ್ನೆ ಎಸೆದೆ. ಎಲ್ಲರೂ ಜೋರಾಗಿ ನಕ್ಕರು.

"ಸರಿ... ಸರಿ... ಇನ್ನೇನಾದರೂ ಇದೆಯೇ?"

ನಾನು 'ಇನ್ನೇನೂ ಇಲ್ಲ' ಎಂದೆ.

'ಸರಿ, ಹಾಗಾದರೆ ಸಂದರ್ಶನ ಮುಗಿಯಿತು.' ಹೌದು ಸಂದರ್ಶನ ನಿಜವಾಗಿಯೂ ಮುಗಿದಿತ್ತು. ನನ್ನ ಸಂದರ್ಶನ ಎರಡೇ ನಿಮಿಷದಲ್ಲಿ ಮುಗಿದೇ ಹೋಗಿತ್ತು. ನಾನು ಉಗುಳು ನುಂಗುತ್ತಾ ಹೊರಗೆ ಬಂದೆ.

ಸಾಯಂಕಾಲಕ್ಕೆ ಯಾರೋ ಆಯ್ಕೆ ಪಟ್ಟಿ ಪ್ರಕಟಿಸಿದ್ದಾರೆ ಎಂಬ ಸುದ್ದಿ ತಂದರು. ಪಟ್ಟಿ ಪ್ರಕಟಿಸಿದ ಬೋರ್ಡಿನ ಬಳಿಗೆ ಓಡಿದೆ, ನನ್ನ ಹೆಸರು ಇದ್ದರೆ ಕೆಳಗೆಯೇ ಎಂಬ ಖಾತರಿಯಿಂದ ನೋಡಿದೆ. ಹತ್ತನೆಯ

ಹೆಸರು ನನ್ನದಲ್ಲ. ಒಂಬತ್ತನೆಯದ್ದೂ ಅಲ್ಲ. ಎಂಟನೆಯದು ಇನ್ಯಾರದೋ ಹೆಸರು. ಏಳನೆಯದ್ದೂ ನನ್ನ ಹೆಸರಾಗಿರಲಿಲ್ಲ. ಮತ್ತೆ ಮೇಲಕ್ಕೆ ನಿರಾಶನಾಗಿ ನೋಡುತ್ತಾ ಹೋದೆ. ನನ್ನ ಕಣ್ಣನ್ನು ನಾನೇ ನಂಬಲಿಲ್ಲ! ಹೌದು, ಮೊಟ್ಟಮೊದಲ ಹೆಸರು ರಸೂಲ್ ಪೂಕುಟ್ಟಿ! ನನ್ನದಾಗಿತ್ತು.

ಮೂಲ : ರಸೂಲ್ ಪೂಕುಟ್ಟಿ

ಕನ್ನಡ ಅನುವಾದ : ಎನ್.ಎ.ಎಂ. ಇಸ್ಮಾಯಿಲ್

## ಚಟುವಟಿಕೆಗಳು

### ❑ ಚರ್ಚಿಸಿರಿ

ಜಾಹೀರಾತುಗಳು ಪತ್ರಿಕೆಯಲ್ಲಿ ರಾರಾಜಿಸುವುದನ್ನು ನೀವೆಲ್ಲ ನೋಡುತ್ತೀರಿ. ಈ ಜಾಹೀರಾತುಗಳು ಎಷ್ಟರ ಮಟ್ಟಿಗೆ ವಿಶ್ವಾಸಾರ್ಹವಾಗಿವೆ? ಇವುಗಳು ಹಣ ಗಳಿಸಲು ಮಾಡುವ ವ್ಯಾಪಾರದ ತಂತ್ರವಲ್ಲವೇ? ತರಗತಿಯಲ್ಲಿ ಚರ್ಚಿಸಿರಿ.

### ❑ ಉತ್ತರ ಬರೆಯಿರಿ

- ಪೂಕುಟ್ಟಿ ಚಿಂತೆಯ ಕಡಲಲ್ಲಿ ಮುಳುಗಲು ಕಾರಣವೇನು?
- ಪುಣೆಯಲ್ಲಿ ಊಟಕ್ಕೆ ಹೋದಾಗ ಪೂಕುಟ್ಟಿಗೆ ಆದ ಅನುಭವವೇನು?

### ❑ ಅನುಭವ ಬರೆಯಿರಿ

ನೀವೂ ಪ್ರಯಾಣ ಮಾಡಿರಬಹುದಲ್ಲವೇ? ನಿಮ್ಮ ಯಾವುದಾದರೂ ಪ್ರಯಾಣದ ಅನುಭವವನ್ನು ಆಕರ್ಷಣೀಯವಾಗಿ ಬರೆದು ತರಗತಿಯಲ್ಲಿ ಮಂಡಿಸಿರಿ.

### ❑ ಜಾಹೀರಾತು ತಯಾರಿಸಿರಿ

ಶಾಲಾ ವಾರ್ಷಿಕೋತ್ಸವಕ್ಕೆ ಶಾಲಾ ಪರಿಸರ, ರಂಗ ಮಂಟಪವನ್ನು ಅಲಂಕರಿಸಲು ಯೋಗ್ಯ ವ್ಯಕ್ತಿಗಳು ಬೇಕಾಗಿದ್ದಾರೆ. ಸ್ಥಳೀಯ ಸಂಜೆ ಪತ್ರಿಕೆಗೆ ನೀಡಲು ಸೂಕ್ತವಾದ ಜಾಹೀರಾತು ತಯಾರಿಸಿರಿ.

## ❑ ತುಂಬಿಸಿರಿ

- ಆವರಣದಲ್ಲಿ ಕೊಟ್ಟಿರುವ ಪದಗಳ ಸರಿಯಾದ ರೂಪವನ್ನು ಖಾಲಿಬಿಟ್ಟ ಜಾಗದಲ್ಲಿ ತುಂಬಿಸಿರಿ.

(ಬಳುವಳಿ, ಆತ್ಮವಿಶ್ವಾಸ, ಸಾರ್ಥಕವಾಗು, ತನ್ನ ಕಣ್ಣನ್ನು ತಾನೇ ನಂಬು, ದುಃಖದ ಕಡಲಲ್ಲಿ ಮುಳುಗು, ಗೋಳೋ ಎಂದು ಅಳು.)

ಕಠಿಣ ಪರಿಶ್ರಮ ಅವನಿಗೆ ಹಿರಿಯರಿಂದ ............... ಯಾಗಿ ಬಂದಿತ್ತು. ರಾತ್ರಿಯಿಡೀ ನಡೆದು ಕಾಲೇಜಿನ ಕಛೇರಿಗೆ ತಲಪಿದಾಗ ಸಮಯ ಮೀರಿತ್ತು. ಇನ್ನು ಪರೀಕ್ಷೆಗೆ ಹಣ ತೆಗೆದುಕೊಳ್ಳಲಾಗದು ಎಂಬ ಕಾರಕೂನನ ಮಾತು ಕೇಳಿ ಅವನು .......................... ದನು. ಆಯಾಸ, ನೋವು, ಅಸಹಾಯಕತೆಗಳಿಂದ ........................ ತೊಡಗಿದನು. ಅವನು ಅಳುವುದು ಪ್ರಾಂಶುಪಾಲರಿಗೆ ಕೇಳಿಸಿತು. ಅವರು ಹೊರಗೆ ಬಂದು ಅಳುವ ಕಾರಣವನ್ನು ವಿಚಾರಿಸಿದರು. ಬಳಿಕ ಕಾರಕೂನನನ್ನು ಕರೆದು ಹಣ ತೆಗೆದುಕೊಳ್ಳಲು ಆಜ್ಞಾಪಿಸಿದರು. ಹುಡುಗನು ........................ ಲಿಲ್ಲ. ಪ್ರಾಂಶುಪಾಲರ ಮಾನವೀಯತೆಯಿಂದ ಹುಡುಗನ ಕಲಿಕೆ .................. ವಾಯಿತು. ವಿಶ್ವವಿದ್ಯಾನಿಲಯಕ್ಕೆ ಮೊದಲನೆಯವನಾಗಿ ತೇರ್ಗಡೆಹೊಂದಿದ ಆ ಹುಡುಗನೇ ಮೋಕ್ಷಗುಂಡಂ ವಿಶ್ವೇಶ್ವರಯ್ಯ.

## ❑ ದಿನಚರಿ ಬರೆಯಿರಿ

ನಿಮ್ಮ ಶಾಲಾದಿನದ ಅನುಭವವನ್ನು ದಿನಚರಿ ರೂಪದಲ್ಲಿ ಬರೆಯಿರಿ.

## ❑ ಪದ ಬರೆಯಿರಿ

ಕೆಳಗೆ ಕೊಟ್ಟಿರುವ ಪದದ ಆರಂಭದ ಅಕ್ಷರವನ್ನು ಬದಲಾಯಿಸಿ ಅರ್ಥವತ್ತಾದ ಪದಗಳನ್ನು ಬರೆಯಿರಿ.

ಸರಳ –ರಳ, –ರಳ, –ರಳ, –ರಳ, –ರಳ, –ರಳ.

## ❑ ವಾಕ್ಯ ಬದಲಾಯಿಸಿ ಬರೆಯಿರಿ

ಅಡಿಗೆರೆ ಎಳೆದ ಪದದ ಬದಲಿಗೆ 'ಅವನು' ಎಂಬ ಪದ ಬಳಸಿ ವಾಕ್ಯವನ್ನು ಬದಲಾಯಿಸಿರಿ.

- <u>ನಾನು</u> ಮೊಟ್ಟ ಮೊದಲ ಬಾರಿಗೆ ಕೇರಳದ ಗಡಿದಾಟುತ್ತಿದ್ದೆ.
- <u>ನಾನು</u> ಪುಣೆಗೆ ಹೋಗುವ ಜಯಂತಿ ಜನತಾ ವೇಗದ ರೈಲು ಹತ್ತಿದೆನು.
- <u>ನಾನು</u> ಉಗುಳು ನುಂಗುತ್ತಾ ಹೊರಗೆ ಬಂದೆ.
- <u>ನಾನು</u> ಮತ್ತು ಹರಿ ಊಟಕ್ಕೆ ಹೊರಗೆ ಹೋದೆವು.

# ಜೈ ಜವಾನ್

ವೀರ ಜವಾನರು ನಮ್ಮ ದೇಶರಕ್ಷಕರು. ಚಳಿ, ಮಳೆ, ಸೆಕೆಯೆನ್ನದೆ, ಹಗಲು ಇರುಳೆನ್ನದೆ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗಿನ ವಿಶಾಲ ಭಾರತವನ್ನು ಕಣ್ಣಲ್ಲಿ ಕಣ್ಣಿಟ್ಟು ದುಷ್ಟರಿಂದ ಕಾಯುವ ನಮ್ಮ ದೇಶದ ಸೈನಿಕರು ಪರಾಕ್ರಮಿಗಳು, ಪ್ರಪಂಚದಲ್ಲೇ ಅಗ್ರಗಣ್ಯರು, ಭಾರತ ಮಾತೆಯ ಹೆಮ್ಮೆಯ ಮಕ್ಕಳು.

ಭಯಾನಕ ರಾತ್ರಿ. ಪ್ರಳಯದಂತೆ ಭೋರ್ಗರೆಯುತ್ತಿರುವ ನೆರೆ ನೀರಿನ ನಡುವೆ ಬದುಕಿ ಉಳಿಯುವ ಹಣಾಹಣಿ. ರಾತ್ರಿ ಕಳೆದು ಬೆಳಗಾಗುವಾಗ ಹೆಣಗಳ ರಾಶಿ.

ಅನಾಹುತದಿಂದ ಬದುಕಿದವರಿಗೂ ಹೆಚ್ಚು ಕಾಲ ಜೀವಂತವಾಗಿ ಉಳಿಯುವ ಧೈರ್ಯ ಇರಲಿಲ್ಲ. ಕೇದಾರನಾಥ, ಬದರೀನಾಥ, ಜೋಷಿಮಠ, ಹೇಮಕುಂಡ ಎಲ್ಲೆಲ್ಲೂ ಹತಾಶೆಯ ತಾಂಡವ.

ಹತಾಶೆಯಲ್ಲಿ ಮುಳುಗಿದ್ದವರಿಗೆ ಸಮವಸ್ತ್ರ ತೊಟ್ಟ ಜನರು ಕಾಣಿಸಿದ್ದರು. ಭಾರತೀಯ ಸೈನ್ಯದ ಸಮವಸ್ತ್ರ !

ಹತಾಶೆ ಮಾಯವಾಗಿ ಭರವಸೆಯ ಕಿರಣ ಕಾಣಿಸಿತ್ತು. ಜನರಲ್ಲಿ ಉತ್ಸಾಹ ಮರಳಿತ್ತು.



ಹೊರಗಿನವರಿಗೆ ಉತ್ತರದ ಬೆಟ್ಟಗಳಲ್ಲಿ ಅನಾಹುತ ನಡೆದ ಸುದ್ದಿ ಬಂದಿದ್ದರೂ ಅದರ ಭಯಾನಕ ಸ್ವರೂಪದ ಬಗ್ಗೆ ಅರಿವೇ ಇರಲಿಲ್ಲ.

ಆದರೆ ಸುದ್ದಿ ತಿಳಿದ ತತ್‌ಕ್ಷಣ ಸಹಾಯಕ್ಕೆ ಧಾವಿಸಿದ್ದು ಭಾರತೀಯ ಸೈನ್ಯ ಮಾತ್ರ!

ಭೂಸೈನ್ಯ. ಭಾರತೀಯ ವಾಯುಪಡೆ ಮತ್ತು ನೌಕಾಪಡೆಗಳು, ಭಾರತ–ಟಿಬೇಟ್ ಗಡಿ ಪೊಲೀಸು, ಬಿ.ಎಸ್.ಎಫ್. ಜವಾನರು ಜಂಟಿ ಕಾರ್ಯಾಚರಣೆ ಆರಂಭಿಸಿದ್ದರು. ಅಲ್ಲಲ್ಲಿ ಸಾವಿನ ಮುಖ ನೋಡುತ್ತಿದ್ದ ಸಾವಿರಾರು ಜನರನ್ನು ಸುರಕ್ಷಿತ ಜಾಗಗಳಿಗೆ ತಲುಪಿಸಿದ್ದರು.

'ನಮ್ಮ ಪಾಲಿಗೆ ಇದೊಂದು ಯುದ್ಧ!' ಎಂದು ಸಾರಿತ್ತು ಭಾರತೀಯ ಸೈನ್ಯ. ಸೈನಿಕರನ್ನು ನೋಡುತ್ತಲೇ ಜನರ ಭಯ ಮಂಗಮಾಯವಾಗಿತ್ತು. 'ಒಬ್ಬ ಜವಾನ್ ನನ್ನ ಕೈ ಹಿಡಿದುಕೊಂಡ. ನನ್ನ ರಕ್ಷಣೆ ಮಾಡದೆ ಕೈ ಬಿಡುವುದಿಲ್ಲ ಎಂಬ ಭರವಸೆ ನನಗಿತ್ತು' – ಹೃಷಿಕೇಶದಲ್ಲಿ ಪಾರಾಗಿ ಬಂದ ಮಹಿಳೆ ಹೇಳಿದ್ದು ಅವಳೊಬ್ಬಳ ಮಾತಾಗಿರಲಿಲ್ಲ. ಅಲ್ಲಿಂದ ಪಾರಾಗಿ ಬಂದ ಎಲ್ಲರ ಎದೆಯಾಳದ ಅಭಿನಂದನೆಯಾಗಿತ್ತು.



‘ನಾವು ಬಂದಿದ್ದೇವೆ. ಇನ್ನು ಯಾರನ್ನೂ ಸಾಯಲು ಬಿಡುವುದಿಲ್ಲ!’ ಲೆಫ್ಟಿನೆಂಟ್ ಜನರಲ್ ಅನಿಲ್ ಛೈತ್‌ರ ಘೋಷಣೆ ಎಲ್ಲರಲ್ಲೂ ವಿದ್ಯುತ್ ಸಂಚಾರ ಹರಿಸಿತ್ತು. ‘ಆಪರೇಶನ್ ರಾಹತ್’ ಎಂಬ ಹೆಸರಿನ ಈ ಯುದ್ಧ ಭಾರತದ ಇತಿಹಾಸದಲ್ಲೇ ಅತಿ ದೊಡ್ಡ ಪರಿಹಾರ ಕಾರ್ಯಾಚರಣೆಯಾಗಿತ್ತು. ಭೂಸೈನ್ಯ 13 ಹೆಲಿಕಾಪ್ಟರ್‌ಗಳ ಜೊತೆಗೆ ಹತ್ತು ಸಾವಿರಕ್ಕೂ ಹೆಚ್ಚು ಸೈನಿಕರನ್ನು ಉತ್ತರಾಖಂಡದ ಕಾರ್ಯಾಚರಣೆಯಲ್ಲಿ ಇಳಿಸಿತ್ತು. ನೌಕಾಪಡೆ 45 ನುರಿತ ಡೈವರ್‌ಗಳನ್ನು ತಂದಿತ್ತು. ವಾಯುಸೇನೆ 36 ಹೆಲಿಕಾಪ್ಟರ್‌ಗಳಲ್ಲದೆ, ಅಲ್ಲಲ್ಲಿ ಸಿಕ್ಕಿಬಿದ್ದ ಜನರಿಗೆ ಪೊಟ್ಟಣಗಳಲ್ಲಿ ಆಹಾರ ಪೂರೈಕೆ ಮಾಡಲು ಪುಟ್ಟ



ವಿಮಾನಗಳನ್ನೂ ಸೇವೆಯಲ್ಲಿ ತೊಡಗಿಸಿತ್ತು. ಇವರ ಜೊತೆಗೆ ರಾಜ್ಯ ಸರಕಾರಗಳು ಮತ್ತು ಖಾಸಗಿ ಸಂಸ್ಥೆಗಳು ತಮ್ಮ ಹೆಲಿಕಾಪ್ಟರ್‌ಗಳನ್ನು ಸೇರಿಸಿ ಬಲವೃದ್ಧಿ ಮಾಡಿದ್ದವು.

ಕಡಿಮೆಯೆಂದರೂ ನೂರು ಹೆಲಿಕಾಪ್ಟರ್ ಮತ್ತು ಹಲವು ಕಿರು ವಿಮಾನಗಳು ನೆರೆಪೀಡಿತರನ್ನು ರಕ್ಷಿಸಲು ದಿನ ರಾತ್ರಿ ಹಾರಾಟ ನಡೆಸಿದ್ದವು. ಸಾವಿರಾರು ಟನ್ ಏರ್–ಡ್ರಾಪ್ ಮಾಡಿದ್ದವು.

ನವದೆಹಲಿಯ ಪಶ್ಚಿಮ ವಾಯು ಕಮಾಂಡ್, ಶಿಲಾಂಗ್‌ನ ಪೂರ್ವ ವಾಯು ಕಮಾಂಡ್, ಅಲಹಾಬಾದ್‌ನ ಕೇಂದ್ರೀಯ ವಾಯು ಕಮಾಂಡ್, ತಿರುವನಂತಪುರಂನ ದಕ್ಷಿಣ ವಾಯು ಕಮಾಂಡ್, ಗಾಂಧೀನಗರದ ನೈಋತ್ಯ ವಾಯು ಕಮಾಂಡ್ ಬೆಂಗಳೂರಿನ ತರಬೇತಿ ವಾಯು ಕಮಾಂಡ್ ಮತ್ತು ನಾಗಪುರದ ಉಸ್ತುವಾರಿ ವಾಯು ಕಮಾಂಡ್ – ಈ ಏಳು ಕಮಾಂಡ್‌ಗಳ ಸಹಿತ ವಾಯುಸೇನೆಯ ಎಲ್ಲ ಸ್ಟೇಶನ್‌ಗಳು ರಕ್ಷಣಾ ಕಾರ್ಯದಲ್ಲಿ ಸಹಕರಿಸಿದ್ದವು.

ಸೈನಿಕರ ಚೈತನ್ಯಕ್ಕೆ ಕೊನೆ ಮೊದಲಿರಲಿಲ್ಲ. ಮಬ್ಬು ಬೆಳಕು. ಅಪಾಯಕಾರಿ ಮಳೆಯ ನಡುವೆ ಪ್ರಾಣಾಪಾಯವನ್ನೂ ಲೆಕ್ಕಿಸದೆ ಸಹಾಯ ಕಾರ್ಯಕ್ಕೆ ಧುಮುಕಿದ್ದರು. ರಜೆಯ ಮೇಲಿದ್ದ ಮೇಜರ್ ಕಾರ್ಕಿ

ದುರಂತದ ದೃಶ್ಯ ನೋಡುತ್ತಲೇ ತಮ್ಮ ಮನೆಯವರನ್ನು ಬಿಟ್ಟು ಜೀಪಿನ ಸಹಿತ ಕೆಸರು ನೆಲಕ್ಕೆ ಧುಮುಕಿ, ಅಪಾಯದಲ್ಲಿದ್ದವರನ್ನು ರಕ್ಷಿಸಿದ್ದರು. ರಜೆಯಲ್ಲಿ ಕಾಶ್ಮೀರದ ತನ್ನ ಮನೆಯಲ್ಲಿ ವಿರಮಿಸುತ್ತಿದ್ದ 14 ಗಡವಾಲ್ ತಂಡದ ಕ್ಯಾಪ್ಟನ್ ಕುಮಾರ್ ಟೀವಿ ವಾರ್ತೆ ನೋಡಿದ ತತ್‌ಕ್ಷಣ ಕಮಾಂಡಿಂಗ್ ಅಧಿಕಾರಿಯ ಅನುಮತಿ ಕೇಳಿ ಕೇದಾರನಾಥಕ್ಕೆ ವಾಯುಸೇನೆಯ ಹೆಲಿಕಾಪ್ಟರ್ ಹಾರಿಸಿ ಜನರ ರಕ್ಷಣೆಯ ಕೆಲಸ ಆರಂಭಿಸಿದ್ದರು. ಇವರೆಲ್ಲರ ಸಾಹಸದ ಫಲವಾಗಿ ಪ್ರಕೃತಿಯ ಆಟೋಪದಲ್ಲಿ ಸಾವಿನ ಮುಖ ನೋಡುತ್ತಿದ್ದ ಐವತ್ತು ಸಾವಿರಕ್ಕೂ ಹೆಚ್ಚು ಯಾತ್ರಿಗಳು, ಉತ್ತರಾಖಂಡ ನಿವಾಸಿಗಳು ಮತ್ತೆ ಬದುಕಿನ ಬೆಳಕು ನೋಡಿದ್ದರು.

ಗೌರೀಕುಂಡದ ಬಳಿ ಸಹಾಯ ಕಾರ್ಯಕ್ಕೆ ಧಾವಿಸಿದ್ದ ಒಂದು ವಾಯುಸೇನೆಯ ಹೆಲಿಕಾಪ್ಟರ್ ಮಬ್ಬು ಕವಿದ ನೆಲದಲ್ಲಿ ಅಪಘಾತಕ್ಕೀಡಾಗಿ ಇಪ್ಪತ್ತು ವೀರ ಸೈನಿಕರನ್ನು ಬಲಿ ತೆಗೆದುಕೊಂಡಿತ್ತು. ಸೈನಿಕರು ಮಡಿದ ಬಾಂಧವರಿಗಾಗಿ ಕಣ್ಣೀರು ಹಾಕಿದ್ದರು. ಆದರೆ ರಾಹತ್ ಕಾರ್ಯಾಚರಣೆಯು ಒಂದು ನಿಮಿಷಕ್ಕೂ ಸ್ಥಗಿತವಾಗಿರಲಿಲ್ಲ. ಇದು ನಮ್ಮ ಸೈನಿಕರ ಕರ್ತವ್ಯಪರಾಯಣತೆಗೆ ಸಾಕ್ಷಿ.

ರಾಹತ್ ಕಾರ್ಯಾಚರಣೆಯ ಒಂದು ದೃಶ್ಯ ಯಾವತ್ತೂ ಮರೆಯಲು ಸಾಧ್ಯವಿಲ್ಲ. ಸೈನಿಕರು ಹಗ್ಗದ ಸೇತುವೆ ರಚಿಸಿ ಅದರ ಮೆಟ್ಟಿಲಾಗಿ ತಾವೇ ಮಲಗಿದ್ದರು. ಜನರು ಅವರ ಬೆನ್ನಿನ ಮೇಲೆ ನಡೆದುಕೊಂಡು ಸುರಕ್ಷೆಯ ಜಾಗಕ್ಕೆ ದಾಟಿ ಹೋಗುತ್ತಿದ್ದ ಈ ದೃಶ್ಯ ನೆನಪಿಗೆ ಬಂದಾಗಲೆಲ್ಲ ನಮ್ಮ ಸೈನ್ಯದ ಬಗ್ಗೆ ಅಭಿಮಾನದಿಂದ ಎದೆಯುಬ್ಬಿ ಬರುತ್ತದೆ.

## ಚಟುವಟಿಕೆಗಳು

### ❑ ಇಷ್ಟವಾದ ಭಾಗ ಓದಿರಿ

ಜೈ ಜವಾನ್ ಪಾಠವನ್ನು ಪೂರ್ಣವಾಗಿ ಓದಿದಿರಲ್ಲವೇ? ಇದರಲ್ಲಿ ನಿಮಗೆ ಇಷ್ಟವಾದ ಭಾಗವನ್ನು ಸ್ವರಭಾವಯುಕ್ತವಾಗಿ ನಿರರ್ಗಳವಾಗಿ ತರಗತಿಯಲ್ಲಿ ಓದಿರಿ.

### ❑ ಚರ್ಚಿಸಿರಿ

ಸೈನಿಕರ ಸಾಹಸ, ಕರ್ತವ್ಯನಿಷ್ಠೆಗಳನ್ನು ಕೇಳಿ ತಿಳಿದಿರಬಹುದಲ್ಲವೇ? ದೇಶಕ್ಕಾಗಿ ಜೀವದ ಹಂಗಿಲ್ಲದೆ ಹೋರಾಡುವ ಅವರ ಸಾಹಸಪ್ರವೃತ್ತಿ, ಮನೋಭಾವಗಳ ಕುರಿತು ಚರ್ಚಿಸಿರಿ.

## ❑ ಉತ್ತರ ಬರೆಯಿರಿ

- ಜನರಲ್ಲಿ ಭರವಸೆಯ ಕಿರಣ ಮೂಡಿದ್ದು ಯಾವಾಗ?
- ಸೈನಿಕರ ಕರ್ತವ್ಯನಿಷ್ಠೆಗೆ ಸಾಕ್ಷಿ ಯಾವುದು?
- ಎಲ್ಲರಲ್ಲೂ ವಿದ್ಯುತ್ ಸಂಚಾರ ಮಾಡಿಸಿದ ಘೋಷಣೆ ಯಾವುದು?

## ❑ ವಿವರಣೆ ಬರೆಯಿರಿ

'ಆಪರೇಶನ್ ರಾಹತ್' ಪರಿಹಾರ ಕಾರ್ಯಾಚರಣೆಯ ಕುರಿತು ವಿವರಣೆ ಬರೆಯಿರಿ.

## ❑ ಭಿತ್ತಿಪತ್ರಿಕೆ ತಯಾರಿಸಿರಿ

ಭಾರತೀಯ ಸೈನಿಕರ ಯಶೋಗಾಥೆಯನ್ನು ಸಂಗ್ರಹಿಸಿ ಭಿತ್ತಿಪತ್ರಿಕೆ ತಯಾರಿಸಿರಿ.

## ❑ ಸಂದರ್ಶನ ನಡೆಸಿರಿ

ನಿಮ್ಮ ಊರಿನ ವೀರ ಜವಾನನೊಬ್ಬನನ್ನು ತರಗತಿಗೆ ಆಮಂತ್ರಿಸಿರಿ. ಸೂಕ್ತ ಪ್ರಶ್ನಾವಳಿಗಳೊಂದಿಗೆ ಸಂದರ್ಶನ ನಡೆಸಿರಿ. ಅವರ ಅನುಭವಗಳನ್ನು ಕೇಳಿ ತಿಳಿಯಿರಿ.

## ❑ ಪತ್ರಿಕಾ ವರದಿ ಬರೆಯಿರಿ

ನಿಮ್ಮ ಊರಿನಲ್ಲಿ ಮಳೆಯ ಅನಾಹುತ ಸಂಭವಿಸಿದಂತೆ ಊಹಿಸಿರಿ. ಆ ಅನಾಹುತದ ಕುರಿತು ಪತ್ರಿಕೆಗೆ ಒಂದು ವರದಿ ಬರೆಯಿರಿ.

## ❑ ಪತ್ರ ಬರೆಯಿರಿ

ಸೈನಿಕರ ಸಾಹಸ, ಜೀವದ ಹಂಗಿಲ್ಲದೆ ಹೋರಾಡುವ ಅವರ ಪ್ರವೃತ್ತಿಯನ್ನು ಅಭಿನಂದಿಸಿ ಒಂದು ಪತ್ರ ಬರೆಯಿರಿ.

## ವಿದ್ಯಾರ್ಥಿಗಳು ಗಳಿಸುವ ಕಲಿಕಾ ಸಾಮರ್ಥ್ಯಗಳು

- ಆಲಿಸಿದ ವಿಚಾರಗಳನ್ನು ತಾರ್ಕಿಕವಾಗಿ ವಿಶ್ಲೇಷಿಸಿ ಅಭಿಪ್ರಾಯವನ್ನು ಮೌಖಿಕವಾಗಿ ಪ್ರಕಟಿಸುವುದು.
- ಭಾಷಾ ಘಟಕಗಳಾದ ಪದಗಳು, ನುಡಿಗಟ್ಟುಗಳು ಗಾದೆಗಳು ಇತ್ಯಾದಿಗಳನ್ನು ಸಂದರ್ಭಾನುಸಾರ ಉಪಯೋಗಿಸಿಕೊಂಡು ಮಾತನಾಡುವುದು.
- ರಾಗ, ತಾಳ, ಭಾವದೊಂದಿಗೆ ಮಂಡಿಸಿದ ಕವಿತೆಗಳನ್ನು ಆಲಿಸಿ ಆಸ್ವಾದಿಸುವುದು.
- ಗದ್ಯ, ಪದ್ಯವನ್ನು ಭಾವಪೂರ್ಣವಾಗಿ ಉಚ್ಚಾರಣ ಶುದ್ಧಿಯೊಂದಿಗೆ ನಿರರ್ಗಳವಾಗಿ ಓದುವುದು.
- ಪ್ರಚಲಿತ ವಿದ್ಯಮಾನಗಳನ್ನು ವಾಚನ ಸಾಮಗ್ರಿಗಳ ಸಹಾಯದಿಂದ ಪರಿಶೀಲಿಸಿ ಸ್ವಂತ ರಚನೆಗಳನ್ನು ಉತ್ತಮಪಡಿಸುವುದು.
- ಸ್ವಂತ ಆಸಕ್ತಿಯಿಂದ ಪುಸ್ತಕ ಮತ್ತು ಇತರ ವಾಚನ ಸಾಮಗ್ರಿಗಳನ್ನು ಕಂಡುಕೊಂಡು ಓದುವುದು.
- ವಾಚನಾನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಕೇಳಿದ, ಓದಿದ ವಿಚಾರಗಳನ್ನು ಅರ್ಥೈಸಿ ಪ್ರಧಾನ ಆಶಯಗಳನ್ನು ತಪ್ಪಿಲ್ಲದೆ ಬರೆಯುವುದು, ಹೇಳುವುದು, ಭಾಷಣ ಮಾಡುವುದು.
- ದಿನಚರಿ, ಆತ್ಮಕಥೆ, ಅನುಭವ ಟಿಪ್ಪಣಿ, ಜೀವನ ಚರಿತ್ರೆ ಮೊದಲಾದ ಲೇಖನಗಳನ್ನು ಓದಿ ಸ್ವಂತ ಅನುಭವಗಳನ್ನು ಸೇರಿಸಿ ಸ್ವಯಂ ರಚನೆ ಮಾಡುವುದು.
- ಸಂದರ್ಭಾನುಸಾರ ವಿಭಿನ್ನ ವ್ಯವಹಾರ ರೂಪಗಳನ್ನು ಆಯ್ದು ರಚನೆಗಳಲ್ಲಿ ತೊಡಗುವುದು. ಮತ್ತು ಇನ್ನೊಂದು ವ್ಯವಹಾರ ರೂಪಕ್ಕೆ ಬದಲಾಯಿಸುವುದು.
- ಸೃಜನಾತ್ಮಕ ಕೃತಿಗಳನ್ನು ತಯಾರಿಸುವುದು ಅವುಗಳನ್ನು ತರಗತಿಯ ಭಿತ್ತಿ ಪತ್ರಿಕೆ, ಹಸ್ತಪತ್ರಿಕೆಗಳಲ್ಲಿ ಪ್ರಕಟಿಸುವುದು.
- ವಿಭಿನ್ನ ಭಾಷಾನುಭವಗಳನ್ನು ಗಳಿಸಿ ಪದಗಳ ಪ್ರಯೋಗಗಳೇ ಮೊದಲಾದವುಗಳನ್ನು ಬಳಸಿಕೊಂಡು ರಚನೆಗಳನ್ನು ಮಾಡುವುದು.
- ಕತೆ, ಕವಿತೆ, ಲೇಖನಗಳಲ್ಲಿ ಸಂದರ್ಭಾನುಸಾರ ಲೇಖನ ಚಿಹ್ನೆಗಳನ್ನು ಬಳಸುವುದು.
- ರಾಗ, ತಾಳ, ಭಾವಗಳಿಂದ ಕವಿತೆಗಳನ್ನು ಹಾಡುವುದು.

# 2. ತನು – ಮನ

ಆರೋಗ್ಯವೇ ಭಾಗ್ಯ. ನಮಗೆ ಉತ್ತಮ ಆರೋಗ್ಯವಿದ್ದರೆ ಎಲ್ಲ ಚಟುವಟಿಕೆಗಳನ್ನು ಲವಲವಿಕೆಯಿಂದ ಮಾಡಬಲ್ಲೆವು. ಪ್ರತಿಯೊಬ್ಬನೂ ಶ್ರಮ ವಹಿಸಿ ದುಡಿದು ಉತ್ತಮ ಆಹಾರವನ್ನು ಸೇವಿಸಿ, ಪರಿಸರವನ್ನು ಶುಚಿಯಾಗಿಡುವುದರಿಂದ ನಮ್ಮ ಆರೋಗ್ಯವನ್ನು ಕಾಪಾಡಬಹುದು. ಆರೋಗ್ಯವು ಐಸಿರಿಯನ್ನು ತರುತ್ತದೆ. ಶಾರೀರಿಕವಾಗಿಯೂ ಮಾನಸಿಕವಾಗಿಯೂ ನಮ್ಮನ್ನು ಸುದೃಢಗೊಳಿಸುತ್ತದೆ.



# ಮನಸ್ಸಿದ್ದರೆ ಮಾರ್ಗ

ಯಾವುದೇ ವೃತ್ತಿಯಲ್ಲಿಯೂ ಮೇಲು ಕೀಳಿಲ್ಲ, ಪ್ರತಿಯೊಬ್ಬನೂ ದುಡಿದು ತಿನ್ನಬೇಕು, ಕೈಕೆಸರಾದರೆ ಬಾಯಿ ಮೊಸರು ಎಂಬ ಗಾದೆಯನ್ನು ಕೇಳಿದ್ದೀರಲ್ಲವೇ? ಯಾವ ಕೆಲಸ ಮಾಡುತ್ತೇವೆ ಎಂಬುದಕ್ಕಿಂತಲೂ, ಹೇಗೆ ಕೆಲಸ ಮಾಡುತ್ತೇವೆ ಎಂಬುದು ಮುಖ್ಯ. ಕೆಲಸವನ್ನೇ ಮಾಡದೆ ಸೋಮಾರಿಗಳಾದರೆ ನಮ್ಮ ಆರೋಗ್ಯ ಕೆಡುವುದು. ಆದ್ದರಿಂದ ದುಡಿಮೆ ನಮ್ಮ ಶೀಲವಾಗಬೇಕು.

ತಿಪ್ಪೇನ ಹಳ್ಳಿಯಲ್ಲಿ ಸಿದ್ದಪ್ಪನೆಂಬ ಕೃಷಿಕನಿದ್ದನು. ಅವನ ಪತ್ನಿ ಸುಶೀಲೆ. ಅವರಿಗೆ ಒಬ್ಬನೇ ಮಗ ಗುಣಪಾಲ ತಂದೆ ತಾಯಂದಿರು ಮಗನನ್ನು ಬಹಳ ಪ್ರೀತಿಯಿಂದ ಸಾಕಿದರು. ತಾವು ಬೆಳೆಸಿದ ಜೋಳದ ಕೃಷಿಯಿಂದ ಬಂದ ಆದಾಯವನ್ನು ಮಗನ ವಿದ್ಯಾಭ್ಯಾಸಕ್ಕೆ ಉಪಯೋಗಿಸಿದರು. ಗುಣಪಾಲ ದಿನದಿಂದ ದಿನಕ್ಕೆ ಮಾತಾಪಿತರ ಪರಿಶ್ರಮದಿಂದಾಗಿ ವಿದ್ಯಾವಂತನಾಗಿ ಬೆಳೆದ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿ ಉನ್ನತ ಶಿಕ್ಷಣಕ್ಕಾಗಿ ನಗರವನ್ನು ಸೇರಿದನು. ಕೃಷಿಯಿಂದ ಬರುವ ಆದಾಯ ಸಾಕಾಗದೆ ನೆರೆಹೊರೆಯವರಲ್ಲಿ ಸಾಲಮಾಡಿ ತಂದೆ ಸಿದ್ದಪ್ಪ ಮಗನಿಗೆ ಬೇಕಾದಷ್ಟು ಹಣ ಕಳುಹಿಸಿ ಕೊಡುತ್ತಿದ್ದ. ಅಂತೂ ತನ್ನ ಮಗ ವಿದ್ಯಾವಂತನಾಗಿ ಒಂದು ಉತ್ತಮ ಉದ್ಯೋಗವನ್ನು ಪಡೆದು ಹೆಸರು ಗಳಿಸಬೇಕು ಎಂಬ ಹಂಬಲ ಅವನದ್ದಾಗಿತ್ತು.



ಗುಣಪಾಲನು ಉನ್ನತ ಶಿಕ್ಷಣ ಮುಗಿಸಿ ಉದ್ಯೋಗವನ್ನು ಅರಸುತ್ತಾ ನಗರದ ಬೀದಿ ಬೀದಿಗಳಲ್ಲಿ ಸುತ್ತಾಡಿದನು. ಎಲ್ಲಿಯೂ ಅವನಿಗೆ ಯೋಗ್ಯವಾದ ಉದ್ಯೋಗ ಸಿಗಲಿಲ್ಲ. ತುಂಬಾ ನಿರಾಶೆಯಿಂದ ತನ್ನ ಹಳ್ಳಿಗೆ ಹಿಂತಿರುಗಿದನು. ವಿಷಯವನ್ನು ತಿಳಿದ ತಂದೆಗೆ ತುಂಬಾ ಬೇಸರವಾಯಿತು. ಆದರೂ ಉದ್ಯೋಗ ಸಿಗುವ ವರೆಗೆ ತನ್ನೊಡನೆ ಕೃಷಿ ಕೆಲಸದಲ್ಲಿ ತೊಡಗುವಂತೆ ಮಗನಿಗೆ ಸೂಚಿಸಿದನು. ಆದರೆ ಗುಣಪಾಲನಾದರೋ "ಅಪ್ಪ, ತಾವೇನು ಹೇಳುತ್ತಿರುವಿರಿ? ಇಷ್ಟೆಲ್ಲ ಹಣ ಖರ್ಚು ಮಾಡಿ ಕಲಿತು ನಾನು ಗದ್ದೆಯಲ್ಲಿ ಕೆಲಸ ಮಾಡುವುದೇ? ಛೇ... ಛೇ... ನನ್ನಿಂದಾಗದು" ಎಂದನು. ಆಗ ಸಿದ್ದಪ್ಪ, "ಮಗೂ, ಉದ್ಯೋಗ ಸಿಗುವವರೆಗೆ ನನ್ನೊಂದಿಗೆ ಬಾ, ನಿನ್ನ ಬೇಸರ ಕಳೆಯಬಹುದು ನನಗೂ ಉಪಕಾರವಾದೀತು" ಎಂದನು. ಆದರೆ ಗುಣಪಾಲ ಇದಕ್ಕೆ ಒಪ್ಪಲೇ ಇಲ್ಲ. "ಅಪ್ಪಾ, ನಾನು ಉದ್ಯೋಗವನ್ನು ಅರಸುತ್ತಾ ನಗರಕ್ಕೆ ಹೋಗುತ್ತೇನೆ. ಉದ್ಯೋಗ ಸಿಗದೆ ಮನೆಗೆ ಬರಲಾರೆ, ಮುಖವನ್ನು ತೋರಿಸಲಾರೆ!" ಎಂದು ಹೇಳಿ ಮನೆ ಬಿಟ್ಟು ಹೊರಟು ಹೋದನು.

ನಗರದಲ್ಲಿ ಎಷ್ಟೇ ಪ್ರಯತ್ನಿಸಿದರೂ ಅವನ ಯೋಗ್ಯತೆಗೆ ಸರಿಯಾದ ಕೆಲಸವೇ ಸಿಗಲಿಲ್ಲ ಕೈಯಲ್ಲಿದ್ದ ಹಣವು ಖಾಲಿಯಾಯಿತು. ಹೊಟ್ಟೆ ಚುರುಗುಟ್ಟತೊಡಗಿತು. ಮುಂದೇನು ಮಾಡುವುದು? 'ಉದ್ಯೋಗ ಸಿಗದೆ ಮುಖ ತೋರಿಸಲಾರೆ' ಎಂದು ತಂದೆಗೆ ಮಾತು ಕೊಟ್ಟಾಗಿದೆ. ಕೈಯಲ್ಲಿ ಕಾಸೂ ಇಲ್ಲ. ಯಾರಲ್ಲಾದರೂ ಸಾಲ ಕೇಳೋಣವೆಂದರೆ ಈ ನಗರವೇ ನನಗೆ ಅಪರಿಚಿತ. ಹಸಿವೆಯನ್ನು ತಾಳಲಾರೆ, ಈ ಹಾಳು ಜೀವನವೇ ನನಗೆ ಭಾರವಾಗಿದೆ ಎಂದು ಯೋಚಿಸುತ್ತಾ ನದಿಯ ಬಳಿಗೆ ಬಂದನು. ಅದೇ ಹೊತ್ತಿಗೆ ಆ ದಾರಿಯಾಗಿ ಒಬ್ಬ ವ್ಯಾಪಾರಿ



ನಡೆದು ಕೊಂಡು ಬರುತ್ತಿದ್ದ. ತಲೆಯಲ್ಲಿ ಮುಂಡಾಸು, ಹೆಗಲಲ್ಲಿ ದೊಡ್ಡ ಜೋಳಿಗೆ, ಜೋಳಿಗೆಯಲ್ಲಿ ಕಬ್ಬಿನ ತುಂಡುಗಳು, ಒಣದ್ರಾಕ್ಷಿ, ಖರ್ಜೂರಗಳನ್ನು ತುಂಬಿಕೊಂಡಿದ್ದನು. ಕೈಕಾಲು ಮುಖ ತೊಳೆದು ದಣಿವಾರಿಸಲೆಂದು ನದಿಯ ಬಳಿಗೆ ಬಂದವನೆ ಯುವಕನನ್ನು ಕಂಡು ಮಾತನಾಡಿಸಲು ತೊಡಗಿದನು.

"ಅಯ್ಯಾ! ಯುವಕ, ಯಾರು ನೀನು? ಇಲ್ಲೇನು ಮಾಡುತ್ತಿರುವೆ?"

ಗುಣಪಾಲ : ಸ್ವಾಮಿ ನಾನೊಬ್ಬ ನಿರುದ್ಯೋಗಿ ವಿದ್ಯಾವಂತನಾಗಿದ್ದೇನೆ. ಆದರೆ ನನ್ನ ಯೋಗ್ಯತೆಗೆ ಸರಿಯಾದ ಉದ್ಯೋಗ ಸಿಗಲೇ ಇಲ್ಲ. ಜೀವನ ನಡೆಸುವುದೇ ಕಷ್ಟವಾಗಿದೆ. ಕೈಯಲ್ಲಿ ಒಂದು ಕಾಸೂ ಇಲ್ಲ.

ವ್ಯಾಪಾರಿ : ಅದಕ್ಕೆ ಏನು ಮಾಡಬೇಕೆಂದಿರುವೆ?

ಗುಣಪಾಲ : ಏನು ಮಾಡಬೇಕೆಂದೇ ತೋಚುವುದಿಲ್ಲ. ನನ್ನ ಬದುಕನ್ನೇ ಕೊನೆಗೊಳಿಸಬೇಕೆಂದಿರುವೆ.

ವ್ಯಾಪಾರಿ : ಅಯ್ಯಾ, ನಾನೊಬ್ಬ ಮನುಷ್ಯರ ಅವಯವಗಳನ್ನು ಖರೀದಿಸಿ ಮಾರುವ ವ್ಯಾಪಾರಿ. ಇದೋ ನನ್ನ ಜೋಳಿಗೆಯಲ್ಲಿ ತುಂಬಿರುವುದೆಲ್ಲ ಮನುಷ್ಯರ ಅಂಗಾಂಗಗಳು. ಈ ಜೋಳಿಗೆಯಲ್ಲಿ ಕೈಕಾಲುಗಳೇ ತುಂಬಿಕೊಂಡಿವೆ. ಇನ್ನೊಂದರಲ್ಲಿ ಕಣ್ಣುಗಳು. ಯಾರಾದರೂ ತಮ್ಮ ಶರೀರದ ಯಾವುದೇ ಅಂಗವನ್ನು ಮಾರುವುದಾದರೂ ಯೋಗ್ಯವಾದ ಬೆಲೆಯನ್ನು ನೀಡಿ ನಾನು ಖರೀದಿಸುತ್ತೇನೆ.

ಗುಣಪಾಲ : ಹಾಗಾದರೆ ನಾನು ಈ ಕೆಲಸವನ್ನೇ ಮಾಡಬೇಕೆ?

ವ್ಯಾಪಾರಿ : "ಹಾಗಲ್ಲವಪ್ಪ. ಇದಕ್ಕೆ ಧಾರಾಳ ಬಂಡವಾಳ ಬೇಕು. ಅದು ನಿನ್ನಿಂದ ಆಗದು. ನಿನಗೆ ಹಣವಿಲ್ಲವೆಂಬ ಚಿಂತೆ. ಅದನ್ನು ಹೋಗಲಾಡಿಸಲು ನಿನ್ನ ಎರಡು ಕಣ್ಣುಗಳನ್ನು ನನಗೆ ಕೊಡು. ಪ್ರತಿಯೊಂದಕ್ಕೂ ರೂಪಾಯಿ ಒಂದು ಲಕ್ಷದಂತೆ ನೀಡುತ್ತೇನೆ. ಹರಿತವಾದ ಚೂರಿಯಿಂದ ಕಣ್ಣನ್ನು ಎಬ್ಬಿಸುತ್ತೇನೆ ಆಗದೇ?" ಎಂದನು.

ಗುಣಪಾಲನಿಗೆ ಸಣ್ಣ ನಡುಕ ಉಂಟಾಯಿತು. "ಏನು ಕಣ್ಣುಗಳನ್ನು ಮಾರುವುದೇ?! ನೀವು ಎಷ್ಟು ಲಕ್ಷ ಕೊಟ್ಟರೇನು? ಕಣ್ಣಿಲ್ಲದ ಮೇಲೆ ಹೇಗೆ ನೋಡಲಿ? ಈ ಪ್ರಪಂಚದ ಸೌಂದರ್ಯವನ್ನು ನೋಡಿ ಅನುಭವಿಸುವ ನಯನಗಳೇ ಇಲ್ಲದ ಮೇಲೆ ನಾನು ಬದುಕಿರುವುದಾದರೂ ಯಾಕೆ? ಎರಡು ಬಿಡಿ! ಒಂದು ಕಣ್ಣನ್ನೂ ನೀಡಲಾರೆ" ಎಂದು ಹೇಳಿದನು. ವ್ಯಾಪಾರಿ ನಿರಾಶನಾಗದೆ "ಹಾಗಾದರೆ ಬೇಡ. ನಿನ್ನ ಕೈಗಳನ್ನು ಕೊಡು ಒಂದು ಕೈಗೆ ರೂಪಾಯಿ ಎರಡು ಲಕ್ಷದಂತೆ ಕೊಡುತ್ತೇನೆ" ಎಂದನು. ಗುಣಪಾಲನಿಗೆ ದಿಕ್ಕೇ ತೋಚದಂತಾಯಿತು! "ಏನು ಹೇಳುತ್ತಿರುವಿರಿ? ಕೈಗಳನ್ನು ಕೊಟ್ಟ ಮೇಲೆ ನೀವು ಕೊಟ್ಟ ಹಣವನ್ನು ನಾನು ಹೇಗೆ ಪಡೆಯಲಿ? ಹತ್ತು ಲಕ್ಷಕೊಟ್ಟರೂ ಕೈಯನ್ನು ಕೊಡಲಾರೆ" ಎಂದು ನಿರಾಕರಿಸಿದನು. ವ್ಯಾಪಾರಿ ಮತ್ತೂ ಮುಂದುವರಿದು "ನೀನು ಮಾರುವುದಿಲ್ಲವಾದರೆ ನಾನು ಒತ್ತಾಯಿಸುವುದಿಲ್ಲ. ನಿನ್ನ ಎರಡು ಕಾಲುಗಳನ್ನು ಕೊಟ್ಟರೆ ಹತ್ತು ಲಕ್ಷ ರೂಪಾಯಿ ಕೊಡುತ್ತೇನೆ ಆಗದೆ?

ಯೋಚಿಸು" ಎಂದನು. "ಏನು ಹೇಳುತ್ತಿರುವಿರಿ! ಕಾಲುಗಳೇ? ನಿಮಗೆ ಏನಾಗಿದೆ? ಸ್ವತಂತ್ರವಾಗಿ ನಡೆಯುವ ನನ್ನ ಕಾಲುಗಳನ್ನು ಕಳೆದುಕೊಂಡರೆ ನನಗೇನು ಸುಖವಿದೆ. ಇದು ಬೇಡವೇ ಬೇಡ" ಎಂದು ಖಡಾಖಂಡಿತವಾಗಿ ನುಡಿದನು.

"ಹೋಗಲಿ ಬಿಡು, ನಿನ್ನ ಇಡೀ ಶರೀರವನ್ನು ಕೊಟ್ಟುಬಿಡು, ಹತ್ತು ಕೋಟಿ ರೂಪಾಯಿ ಕೊಡುತ್ತೇನೆ" ಎಂದು ವ್ಯಾಪಾರಿ ಕೇಳಿದ. ಗುಣಪಾಲನ ಸಿಟ್ಟು ನೆತ್ತಿಗೇರಿತು.

"ಎಲೈ, ವ್ಯಾಪಾರಿ! ನೀನೊಬ್ಬ ಕ್ರೂರ ಪಿಶಾಚಿಯಾಗಿರಬೇಕು. ನಿನ್ನ ಹತ್ತು ಕೋಟಿ ಬಿಡು, ಐವತ್ತು ಕೋಟಿ ರೂಪಾಯಿ ನೀಡಿದರೂ ನನ್ನ ದೇಹವನ್ನು ಕೊಡಲಾರೆ. ನೀನು ಮುಂದಕ್ಕೆ ಹೋಗು" ಎಂದನು. ವ್ಯಾಪಾರಿಗೆ ನಗು ತಡೆಯಲಾಗಲಿಲ್ಲ. "ಅಯ್ಯಾ, ನಿನ್ನಲ್ಲಿ ಒಂದೂ ಪೈಸೆ ಇಲ್ಲವೆಂದು ಹೇಳಿ ಅರೆಕ್ಷಣದ ಮೊದಲು ಈ ದೇಹವನ್ನು ವೃಥಾ ಕಳೆದುಕೊಳ್ಳಲು ಸಿದ್ಧನಾದೆಯಲ್ಲ. ಐವತ್ತು ಕೋಟಿ ರೂಪಾಯಿಗಿಂತಲೂ ಹೆಚ್ಚು ಅಮೂಲ್ಯದ ಶರೀರ ನಿನ್ನದೆಂದು ಈಗ ತಿಳಿದುಕೊಂಡಿರುವಿ. ಈ ಶರೀರವನ್ನು ಸದ್ಬಳಕೆ ಮಾಡಿದರೆ ಖಂಡಿತಾ ಬದುಕಲು ದಾರಿಯಿದೆ. 'ಮನಸ್ಸಿದ್ದರೆ ಮಾರ್ಗವಿದೆ' ಎಂಬ ಮಾತನ್ನು ಕೇಳಲಿಲ್ಲವೇ? ಅಕ್ಕಸಾಲಿಗನ ಅಚ್ಚುಗಾಲಿಯಲ್ಲಿ ಸಿಕ್ಕಿದ ಚಿನ್ನದ ಗಟ್ಟಿ ಸುಂದರ ಆಕಾರ ತಾಳುವಂತೆ ತಮ್ಮ ಶರೀರವನ್ನು ದಂಡಿಸಿ ದುಡಿತಕ್ಕೊಳಪಡಿಸಿದಾಗಲೇ 'ದುಡಿತದ ತುಡಿತ' ಏನು ಎಂಬುದು ಅರ್ಥವಾಗುವುದು. ನಿಜವಾಗಿಯೂ ನಾನು ಅಂಗಾಂಗಗಳ ವ್ಯಾಪಾರಿಯಲ್ಲ. ಈ ಜೋಳಿಗೆಯಲ್ಲಿರುವುದು ಒಣದ್ರಾಕ್ಷಿ, ಖರ್ಜೂರ ಮತ್ತು ಕಬ್ಬಿನ ತುಂಡುಗಳು. ಇದನ್ನು ನಾನು ನನ್ನ ಮನೆಗೆ ಕೊಂಡುಹೋಗುತ್ತಿದ್ದೇನೆ" ಎಂದು ಹೇಳಿದನು.

ಗುಣಪಾಲನಿಗೆ ಆಶ್ಚರ್ಯವಾಯಿತು. ಕೂಡಲೇ ಆ ವ್ಯಾಪಾರಿಯ ಕಾಲಿಗೆ ಸಾಷ್ಟಾಂಗ ನಮಸ್ಕರಿಸಿದನು. "ಸ್ವಾಮೀ ತಾವು ಮಹಾತ್ಮರು; ನನ್ನ ಕಣ್ಣನ್ನು ತೆರೆಸಿದಿರಿ! ನೀವು ಬಾರದೆ ಇರುತ್ತಿದ್ದರೆ ನನ್ನ ಪ್ರಾಣವೇ ಹೋಗುತ್ತಿತ್ತು. ನನಗೆ ಜೀವದಾನ ಕೊಟ್ಟ ಪುಣ್ಯಾತ್ಮರು ತಾವು. ಎಲ್ಲವನ್ನು ತಿಳಿದುಕೊಂಡೆ. ನಾನು ನನ್ನ ಹಳ್ಳಿಗೆ ಹೋಗುತ್ತೇನೆ. ಗದ್ದೆಯಲ್ಲಿ ದುಡಿಯುತ್ತೇನೆ. ಚಿನ್ನದ ಬೆಳೆ ತೆಗೆಯುತ್ತೇನೆ" ಎಂದು ಹೇಳುತ್ತಾ ವ್ಯಾಪಾರಿಯನ್ನು ಬೀಳ್ಕೊಟ್ಟು ಮನೆಯ ಕಡೆಗೆ ಹೊರಟನು.

ಸಿದ್ದಪ್ಪ ದಂಪತಿಗಳು ಮಗನ ನಿರೀಕ್ಷೆಯಲ್ಲೇ ಕಾಲಕಳೆಯುತ್ತಿದ್ದರು. ಗುಣಪಾಲನು ಮನೆಗೆ ಬಂದವನೇ ನಡೆದ ಘಟನೆಗಳನ್ನು ವಿವರಿಸಿ ತಂದೆ ತಾಯಿಗೆ ಸಮಾಧಾನದ ಮಾತನ್ನು ಹೇಳಿದನು. ಪಾಳುಬಿದ್ದ ತನ್ನ ಜೋಳದ ಗದ್ದೆಯಲ್ಲಿ ಉತ್ತಮ ಫಸಲನ್ನು ತೆಗೆಯತೊಡಗಿದನು. ದಿನದಿಂದ ದಿನಕ್ಕೆ ಅವನ ಆದಾಯ ವೃದ್ಧಿಯಾಗತೊಡಗಿತು. ತನ್ನ ಮಾತಾಪಿತರನ್ನು ಬಹಳ ಸುಖದಿಂದಿರುವಂತೆ ನೋಡಿಕೊಳ್ಳುವುದರ ಮೂಲಕ ಒಬ್ಬ ಆದರ್ಶ ಕೃಷಿಕ ನೆನಿಸಿಕೊಂಡನು.

ಪ. ರಾಮಕೃಷ್ಣ ಶಾಸ್ತ್ರಿ

## ಚಟುವಟಿಕೆಗಳು

### ❑ ಚರ್ಚಿಸಿರಿ

- "ಇಷ್ಟೆಲ್ಲ ಖರ್ಚುಮಾಡಿ ಕಲಿತು ಗದ್ದೆಯಲ್ಲಿ ಕೆಲಸ ಮಾಡುವುದೇ? ಛೇ, ಛೇ ನನ್ನಿಂದಾಗದು." ಗುಣಪಾಲನ ಈ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು? ಚರ್ಚಿಸಿರಿ.

### ❑ ಉತ್ತರಿಸಿರಿ

- ಗುಣಪಾಲನಿಗೆ ಜೀವನದಲ್ಲಿ ಬೇಸರ ಮೂಡಲು ಕಾರಣವೇನು?
- ಐವತ್ತು ಕೋಟಿ ಕೊಡುವುದಿದ್ದರೂ ನನ್ನ ಶರೀರವನ್ನು ನಿನಗೆ ಮಾರಲಾರೆ ಎಂದು ಗುಣಪಾಲನು ಹೇಳಲು ಕಾರಣವೇನು?

### ❑ ಸಂದರ್ಭ ತಿಳಿಸಿರಿ

ಕೆಳಗಿನ ಮಾತುಗಳನ್ನು ಯಾರು, ಯಾರಲ್ಲಿ ಹೇಳಿದರು?

- "ಇಷ್ಟೆಲ್ಲ ಖರ್ಚುಮಾಡಿ ಕಲಿತು ಗದ್ದೆಯಲ್ಲಿ ಕೆಲಸಮಾಡುವುದೇ?"
- "ಈ ಪ್ರಪಂಚದ ಸೌಂದರ್ಯವನ್ನು ನೋಡಿ ಅನುಭವಿಸುವ ನಯನಗಳೇ ಇಲ್ಲದ ಮೇಲೆ ನಾನು ಬದುಕಿರುವುದಾದರೂ ಯಾಕೆ?"
- "ನಿಮ್ಮ ಎರಡು ಕಾಲುಗಳನ್ನು ಕೊಟ್ಟರೆ ಹತ್ತು ಲಕ್ಷ ರೂಪಾಯಿ ನೀಡುತ್ತೇನೆ."

### ❑ ನಾಣ್ಣುಡಿ ಬರೆಯಿರಿ

ಈ ಶರೀರವನ್ನು ಸದ್ಬಳಕೆ ಮಾಡಿದರೆ, ಖಂಡಿತ ಬದುಕಲು ಸಾಧ್ಯವಿದೆ. 'ಮನಸ್ಸಿದ್ದರೆ ಮಾರ್ಗವಿದೆ' ಎಂಬ ಮಾತನ್ನು ಕೇಳಲಿಲ್ಲವೇ? ವ್ಯಾಪಾರಿ ಹೇಳಿದ ಈ ಮಾತಿನಲ್ಲಿರುವ ನಾಣ್ಣುಡಿ ಯಾವುದು? ನಿಮಗೆ ತಿಳಿದಿರುವ ಕೆಲವು ನಾಣ್ಣುಡಿಗಳನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

### ❑ ವಾಕ್ಯ ಮಾಡಿರಿ

ಕೋಣೆಗಳಲ್ಲಿ ಕೆಲವು ಪದಗಳಿವೆ. ಅವುಗಳನ್ನು ಬಳಸಿ ಉದಾಹರಣೆಯಲ್ಲಿ ಕೊಟ್ಟಿರುವಂತೆ ವಾಕ್ಯಗಳನ್ನು ರಚಿಸಿರಿ.

| | | | |
|---|---|---|---|
| ಆರೋಗ್ಯ | ಅವಿದ್ಯಾವಂತ | ಪರಿಚಿತ | ಬೇಸರ |
| ಹಗುರ | ನಿರುದ್ಯೋಗಿ | ಅಪರಿಚಿತ | ವಿದ್ಯಾವಂತ |
| ಸಂತೋಷ | ಅನಾರೋಗ್ಯ | ಉದ್ಯೋಗಿ | ಭಾರ |

ಉದಾ : ಪ್ರಕೃತಿಯಲ್ಲಿ ದೊರಕುವ ಹಣ್ಣುಗಳನ್ನು ತಿನ್ನುವುದು ಆರೋಗ್ಯಕ್ಕೆ ಉತ್ತಮ.

ಪೇಟೆಗಳಲ್ಲಿ ದೊರಕುವ ತಿಂಡಿಗಳನ್ನು ಹೆಚ್ಚಾಗಿ ತಿಂದರೆ ಅವುಗಳು ಅನಾರೋಗ್ಯಕ್ಕೆ ಕಾರಣವಾಗುತ್ತವೆ.

## ❑ ಸಂಭಾಷಣೆ ಬರೆಯಿರಿ

ಈ ಕತೆಯನ್ನು ಓದಿ ಆಸ್ವಾದಿಸಿದಿರಲ್ಲವೇ? ವ್ಯಾಪಾರಿಯು ಗುಣಪಾಲನಲ್ಲಿ ಅಂಗಾಂಗಗಳನ್ನು ಕೇಳುವ ಸಂದರ್ಭವನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.

## ❑ ವಾಕ್ಯ ರಚಿಸಿರಿ

ಕೆಳಗಿನ ವಾಕ್ಯಗಳನ್ನು ಓದಿರಿ. ಅಡಿಗೆರೆ ಎಳೆದ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿರಿ.

- ನಾನು ಆಲೋಚಿಸದೆ ಯಾವುದೇ ಕಾರ್ಯ ಮಾಡಲಾರೆನೆಂದು ಸುಮ ಖಡಾಖಂಡಿತವಾಗಿ ನುಡಿದಳು.
- ಅಪರಾಧಿಯ ದುಷ್ಕೃತ್ಯವನ್ನು ನೋಡಿದ ಪೋಲೀಸನ ಸಿಟ್ಟುನೆತ್ತಿಗೇರಿತು.
- ಸೀತೆಯು ರಾಮನ ನಿರೀಕ್ಷೆಯಲ್ಲೇ ಅಶೋಕವನದಲ್ಲಿ ಕಾಲಕಳೆಯುತ್ತಿದ್ದಳು.
- ಬುದ್ಧಿಮಾತುಗಳಿಂದ ತನ್ನ ಕಣ್ಣು ತೆರೆಸಿದ ಗುರುಗಳಿಗೆ ಆಶಾ ತಲೆಬಾಗಿ ವಂದಿಸಿದಳು.
- ಶಸ್ತ್ರಚಿಕಿತ್ಸೆ ನಡೆಸಬೇಕಾದರೆ ಎರಡು ಲಕ್ಷ ರೂಪಾಯಿಗಳನ್ನು ತರಲೇಬೇಕೆಂಬ ವೈದ್ಯರ ನುಡಿಕೇಳಿ ರೋಗಿಗೆ ದಿಕ್ಕೇ ತೋಚದಾಯಿತು.

## ❑ ಸರಿಪಡಿಸಿ ಬರೆಯಿರಿ


- ಗದ್ಯಭಾಗದಲ್ಲಿ ಬರೆದಿರುವ ಅಕ್ಷರದೋಷಗಳನ್ನು ಸರಿಪಡಿಸಿ ಬರೆಯಿರಿ.

ಅದೊಂದು ದೊಡ್ಡ ನೇರಲೆಮರ. ಗುಂಡನಿಗೆ ಅದರ ನೆರಲಿನಲ್ಲಿ ಆಡುವುದೆಂದರೆ ಎಲ್ಲಿಳ್ಳಿದ ಉತ್ಸಾಹ. ಆ ನೇರಳೆ ಮರದ ಮೇಲೆ ಅತ್ತಿ ಕುಣಿಯುತ್ತಿದ್ಧ ಅಣ್ಣುಗಳನ್ನು ಮನಸೋ ಇಚ್ಚೆ ತಿನ್ನುತ್ತಿದ್ದ. ಅದರ ನೆರಳಿನಲ್ಲಿ ಕುಳಿತು ನಿದ್ದೆ ಮಾಡಿದರೇ ಅವನಿಗೆ ಸಮಾಧಾನ. ಮರಕ್ಕೂ ಅಷ್ಟೇ ಗುಂಡನ ಕಂಡರೆ ಹೆಲ್ಲಿಲ್ಲದ ಪ್ರೀತಿ. ಗುಂಡ ಬೆಲೆದು ದೊಡ್ಡವನಾದ. ಆ ಮರವನ್ನು ಮರತೇ ಬಿಟ್ಟ.


ಗುಂಡ ಒಂದು ದಿನ ತಿರುಗಾಡುತ್ತಿದ್ದ, ಆ ನೇರಲೆ ಮರದ ಬಳಿ ಬಂದ. ಆತ ಬಹಲ ದುಃಖದಲ್ಲಿದ್ದ. “ಬಾ, ನನ್ನ ಜತೆ ಆಟವಾಡು” ಆಹ್ವಾನಿಸಿತು ಮರ. ನಿನ್ನ ಮೇಲೆ ಅತ್ತಿತ್ತ ಕುಣಿದಾಡಲು ನಾನೇನು ಚಿಕ್ಕ ಮಗೂನೆ? ನನಗೀಗ ದುಡ್ಡು ಬೇಕಾಗಿದೆ. ನನಗೆ ಮನಸ್ಸಿದೆ “ಆದರೆ ನನ್ನ ಬಳಿ ಅಣವಿಲ್ಲ. ಹೇನು ಮಾಡಲಿ?” ಹಾಂ, ನನ್ನ ಹಣ್ಣುಗಳನ್ನು ಆಯ್ದುಕೊಂಡು ಓಗಿ ಪೇಟೆಯಲ್ಲಿ ಮಾರು. ನಿನಗೆ ದುಡ್ಡು ಸಿಗುತ್ತದೆ. ಹಾಗ ನಿನಗೆ ಬೇಕಾದ್ದನ್ನು ಖರೀದಿ ಮಾಡಬಹುದು.” ಸಲಹೆ ಕೊಟ್ಟಿತು ಮರ. ಉಡುಗನು ಕುಷಿಯಿಂದ ನೇರಳೆ ಅಣ್ಣುಗಳನ್ನು ಕೊಯ್ಯಲು ನಿರ್ಧರಿಸಿದನು.

# ಸರ್ವಜ್ಞನ ವಚನಗಳು

ನಮಗೆ ಬದುಕಲು ನೀರು ಗಾಳಿಯಂತೆ ಆಹಾರವೂ ಅತೀ ಅಗತ್ಯ. ಉತ್ತಮ ಆಹಾರ ಸೇವನೆಯಿಂದ ಒಳ್ಳೆಯ ಆರೋಗ್ಯ ನಮ್ಮದಾಗುತ್ತದೆ. ಊಟ ಬಲ್ಲವನಿಗೆ ರೋಗವಿಲ್ಲ ಎಂದು ಹಿರಿಯರು ಹೇಳಿರುವುದರ ಅರ್ಥವು ಇದೇ ಆಗಿದೆ. ಊಟ ಇಲ್ಲದಿದ್ದರೆ ನಮ್ಮ ಪ್ರಾಣ ಉಳಿಯಲಾರದು.







ಅನ್ನದೇವರ ಮುಂದೆ। ಇನ್ನು ದೇವರು ಉಂಟೆ।
ಅನ್ನವುಂಟಾದರುಣಲುಂಟು ಜಗಕೆಲ್ಲ।
ಅನ್ನವೇ ಪ್ರಾಣ ಸರ್ವಜ್ಞ ॥

ರಾಗಿಯನು ಉಂಬುವನು ನಿರೋಗಿಯೆಂದೆನಿಸುವನು।
ರಾಗಿಯೂ ಭೋಗಿಗಳಿಗಲ್ಲ, ಬಡವರಿ–
ಗಾಗಿ ಬೆಳೆದಿಹುದು ಸರ್ವಜ್ಞ ॥

ಹಸಿಯದಿರೆ ಉಣಬೇಡ। ಹಸಿದು ಮತ್ತಿರಬೇಡ
ಬಿಸಿಬೇಡ, ತಂಗುಳುಣಬೇಡ ವೈದ್ಯರ।
ಬೆಸಸಲೇಬೇಡ ಸರ್ವಜ್ಞ ॥

ನಾಲಿಗೆಯ ಕಟ್ಟಿದನು। ಕಾಲನಿಗೆ ದೂರನಹ।
ನಾಲಿಗೆಯು ರುಚಿಯ ಮೇಲಾಡುತಿರಲವನ।
ಕಾಲ ಹತ್ತಿರವು ಸರ್ವಜ್ಞ ॥



## ಚಟುವಟಿಕೆಗಳು

### ❑ ಹಾಡಿರಿ

- ಈ ವಚನಗಳನ್ನು ರಾಗವಾಗಿ ಹಾಡಿರಿ.

### ❑ ಉತ್ತರಿಸಿರಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

- ಸರ್ವಜ್ಞನು ಅನ್ನವನ್ನು ದೇವರು ಎಂದು ಕರೆಯಲು ಕಾರಣವೇನು?
- ರಾಗಿಯ ಮಹತ್ವವನ್ನು ಕವಿ ಹೇಗೆ ಸಾರಿದ್ದಾನೆ?

### ❑ ಚರ್ಚಿಸಿರಿ

ರಾಗಿಯು ಬಡವರಿಗಾಗಿ ಎಂದು ಸರ್ವಜ್ಞನು ಹೇಳಲು ಕಾರಣವೇನಿರಬಹುದು? ತರಗತಿಯಲ್ಲಿ ಚರ್ಚಿಸಿರಿ.

### ❑ ವಿವರಣೆ ಬರೆಯಿರಿ

'ನಾವು ಸೇವಿಸುವ ಆಹಾರ' ಈ ವಿಷಯದ ಕುರಿತು ವಿವರಣೆ ಬರೆಯಿರಿ.

### ❑ ಸಂಚಿಕೆ ತಯಾರಿಸಿರಿ

ನಮ್ಮ ಆಹಾರಕ್ಕೆ ಸಂಬಂಧಿಸಿರುವ ಕತೆ, ಕವಿತೆ, ಒಗಟು, ಗಾದೆಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

### ❑ ಸಂಗ್ರಹಿಸಿರಿ

ವಿದ್ಯೆಗೆ ಸಂಬಂಧಿಸಿದಂತೆ ಸರ್ವಜ್ಞನು ಅನೇಕ ವಚನಗಳನ್ನು ಹೇಳಿದ್ದಾನೆ. ಅವುಗಳಲ್ಲಿ ಯಾವುದಾದರೂ ಐದು ವಚನಗಳನ್ನು ಸಂಗ್ರಹಿಸಿ ಬರೆಯಿರಿ.

# ಗೆಳತಿಗೆ ಪತ್ರ

ಇಂದು ನಾವು ತರತರದ ಆಹಾರವಸ್ತುಗಳನ್ನು ಸೇವಿಸುತ್ತೇವೆ. ಅದರಲ್ಲೂ ಸಿದ್ಧ ಆಹಾರ ವಸ್ತುಗಳು ನಮ್ಮ ಆರೋಗ್ಯವನ್ನು ಹದಗೆಡಿಸುತ್ತಿವೆ. ನಮ್ಮ ಆರೋಗ್ಯವನ್ನು ಬಾಧಿಸುವ ತಿಂಡಿತಿನಸುಗಳನ್ನು ಆದಷ್ಟು ದೂರವಿಡಬೇಕು. ನಾವು ಒಳ್ಳೆಯ ಆಹಾರಾಭ್ಯಾಸಗಳನ್ನು ಅಳವಡಿಸುವ ಮನೋಭಾವ ಬೆಳೆಸಬೇಕು.

ಸ್ಥಳ : ಮಂಗಳೂರು
ತಾರೀಕು : 01.10.2013

ಪ್ರೀತಿಯ ರಮ್ಯಳಿಗೆ,

ನಿನ್ನ ಗೆಳತಿ ಸೌಮ್ಯಳ ಪ್ರೀತಿಪೂರ್ವಕ ವಂದನೆಗಳು. ನಾನು ಕ್ಷೇಮ. ನೀನು ಮತ್ತು ನಿನ್ನ ಗೆಳತಿಯರು ಕ್ಷೇಮವೆಂದು ನಂಬುತ್ತೇನೆ.

ನೀನು ಹೇಗಿದ್ದೀಯಾ? ಚೆನ್ನಾಗಿ ಕಲಿಯುತ್ತಿರುವೆಯಾ? ಈಗ ನನಗೆ ಇಲ್ಲಿನ ಪರಿಸರ ಒಗ್ಗಿದೆ, ಮಾತ್ರವಲ್ಲ ತುಂಬಾ ಹಿಡಿಸಿದೆ. ಕಾಲೇಜಿಗೆ ಸೇರಿದ ಆರಂಭದಲ್ಲಿ ನಿನ್ನನ್ನು ಕಂಡಾಗ ನಾನು ಹೇಳಿದ್ದೇನಲ್ಲ. ಇಲ್ಲಿಯ ಅಜ್ಜಿಯನ್ನು ನಮಗೆ ಕಂಡರಾಗುವುದಿಲ್ಲವೆಂದು. ಅಜ್ಜಿಯ ಊಟ ತಿಂಡಿಯಂತೂ ಇಷ್ಟವೇ ಇರಲಿಲ್ಲ ಯಾಕೆ ಗೊತ್ತಾ? ಆ ಮುದುಕಿ ಭಾರಿ ಜೋರು. ಕಾಲೇಜಿನಿಂದ ಬರುವುದು ಸ್ವಲ್ಪ ತಡವಾದರೂ ಕಾರಣ ವಿಚಾರಿಸುತ್ತಾರೆ. ಅವರು ಮಾಡುವ ಅನ್ನ, ಸಾರು, ಗೊಜ್ಜು ಯಾರಿಗೆ ಬೇಕು! ಮನೆಯ ಹಿತ್ತಿಲಿನ ಪಪ್ಪಾಯಿಯೋ, ಗಡ್ಡೆ ಗೆಣಸುಗಳೋ, ಸೊಪ್ಪು, ಬಾಳೆದಿಂಡು, ಯಾರಿಗೂ ಬೇಡದ ಹಲಸು ಇತ್ಯಾದಿಗಳೇ ಇಲ್ಲಿಯ ತರಕಾರಿ. ನನ್ನ ಇಷ್ಟದ ಆಲೂಗಡ್ಡೆ, ಕೇಬೆಜ್‌ನ ಸಿಪ್ಪೆ ಕೂಡ ಕಾಣಲಿಕ್ಕಿಲ್ಲ. ಹಾಗೆಯೇ ತಿಂಡಿಕೂಡಾ. ನನ್ನ ಮೆಚ್ಚಿನ ಪೂರಿ, ಪರೋಟಾ ಕಾಣದೆ ತಿಂಗಳೇ ಕಳೆಯಿತು. ಕುರುಕಲು ತಿಂಡಿ ಎಂದರೆ, ಕಾಯಿತುರಿ, ಸಕ್ಕರೆ ಹಾಕಿದ ಹುರಿದ ಅಕ್ಕಿಯ ಹುಡಿ ಅಥವಾ ಉಂಡೆ, ಅಲ್ಲವಾದರೆ ಹುರಿದ ನೆಲಗಡಲೆ. ಹೊರಗಿನಿಂದ ಯಾವ ವಸ್ತುವೂ



ತರಬಾರದು ಅಥವಾ ತಿನ್ನಬಾರದು ಎಂಬ ಕಡ್ಡಾಯ ಬೇರೆ. ಊಟದ ಬಳಿಕ ಒಮ್ಮೆ ನಾನು ಐಸ್ಕ್ರೀಂನ ಕುರಿತು ಹೇಳಿ ಅದೆಷ್ಟು ರುಚಿ! ಎಂದಾಗ "ಈ ಹಸುವಿನ ಹಾಲಿಗೆ ಯಾವ ಐಸ್‌ಕ್ರೀಮೂ ಬರಲ್ಲ" ಎಂದು ಅಜ್ಜಿ ಬಾಯಿಗೆ ಬಂದಂತೆ ಬಯ್ದಿದ್ದರು.

ಕಳೆದವಾರ ಏನಾಯಿತು ಗೊತ್ತಾ? ನಾನು ಮತ್ತು ಜೊತೆಗಾತಿ ರೀಟಾ ಹೇಗಾದರೂ ಪೇಟೆತಿಂಡಿ ತಿನ್ನಲು ತೀರ್ಮಾನಿಸಿದೆವು. ಅದಕ್ಕಾಗಿ ಕಾಲೇಜಿನ ಗೆಳತಿಯ ಜತೆಗೆ ಸಮೋಸ ತಿಂದೆವು. ಅಂದು ಸಂಜೆ ಏನೇನೋ ಕಾರಣ ಹೇಳಿ ನಾವು ಊಟವನ್ನೇ ಮಾಡಲಿಲ್ಲ. ನಮ್ಮ ಕೋಣೆ ಸೇರಿದಾಗ ಅಜ್ಜಿಯ ಕರೆ. 'ಬನ್ನಿ ಸೇರಿದಷ್ಟು ಬಿಸಿ ಗಂಜಿಕುಡಿಯಿರಿ' ಎಂದು, ಯಾರಿಗೆ ಬೇಕು ಈ ಗಂಜಿ? ರುಚಿಯಾದ 'ಸಮೋಸ' ತಿಂದ ಮೇಲೆ! ಏನು ರುಚಿ! ಏನು ಪರಿಮಳ!! ಅಜ್ಜಿಯಲ್ಲಿ ಏನೇನೋ ಕಾರಣ ಹೇಳಿ ನಾವಂತೂ ಗಂಜಿ ಮುಟ್ಟಲಿಲ್ಲ. ಹಾಲನ್ನೂ ಕುಡಿಯಲಿಲ್ಲ. ಅಜ್ಜಿಗೆ ಏನು ತೋರಿತೋ ಏನೋ? ಮತ್ತೆ ನಮ್ಮನ್ನು ಕರೆಯಲೂ ಇಲ್ಲ. ನಾವು ಸ್ವಲ್ಪ ಹೊತ್ತು ಓದುವ ನಟನೆ ಮಾಡಿದೆವು. ಅಜ್ಜಿಯ ಕಣ್ಣಿಗೆ ಮಣ್ಣುಹಾಕಿದೆವೆಂದು ಒಳಗೊಳಗೆ ನಗುತ್ತಾ ಮಲಗಿ ನಿದ್ದೆ ಹೋದೆವು.

ಮಧ್ಯರಾತ್ರಿ ಕಳೆದಿರಬಹುದು. ನನಗೆ ಫಕ್ಕನೆ ಎಚ್ಚರವಾಯಿತು. ಹೊಟ್ಟೆಯಲ್ಲಿ ಏನೋ ತಳಮಳ! ವಾಂತಿ ಬರುವುದೋ ಎಂದು ತೋರಿತು. ನಾನು ಎದ್ದು ನೋಡಿದಾಗ ರೀಟಾ ಬಚ್ಚಲಿನಿಂದ ಬರುತ್ತಿದ್ದಳು. "ಏನೋ ಸಣ್ಣಗೆ ಹೊಟ್ಟೆ ನೋಯುತ್ತಿದೆ ಕಣೇ" ಎಂದು ಅವಳು ಹೇಳಿ ಮುಗಿಸುವುದಕ್ಕೆ ಮೊದಲೇ ನಾನು ಸಿಂಕಿನ ಬಳಿಗೆ ಓಡಿದೆ. ಒಮ್ಮೆಲೆ ವಾಕ್ ಎಂದು ವಾಂತಿಯಾಯಿತು. ಬಾಯಿ ತೊಳೆದು ಮಲಗಲು ನಡೆದೆನಷ್ಟೆ ರೀಟಾ ಪುನಃ ಬಚ್ಚಲಿಗೆ ಓಡಿದಳು. ನಾನು ಪುನಃ ವಾಂತಿ ಮಾಡಲು ಸಿಂಕಿನ ಬಳಿಗೆ. ಹೀಗೆ ಎರಡು, ಮೂರು ಬಾರಿ ಆದಾಗ ಇಬ್ಬರಿಗೂ ಸುಸ್ತೋ ಸುಸ್ತು! ನಾನಂತೂ ಅಳುವುದೊಂದೇ ಬಾಕಿ. ಅಷ್ಟರಲ್ಲಿ ಅಜ್ಜಿ ಬಂದು ಬಾಗಿಲು ತಟ್ಟಿ ಕರೆದರು, ಅಜ್ಜಿಗೆ ಹೇಗೆ ತಿಳಿಯಿತಪ್ಪಾ ಎಂದು ಆಶ್ಚರ್ಯಗೊಂಡರೂ ಸುಸ್ತಿನಿಂದಲೇ ಹೋಗಿ ಕದ ತೆರೆದೆನು.




ಒಳಕ್ಕೆ ಬಂದ ಅಜ್ಜಿಗೆ ನಮ್ಮಿಬ್ಬರ ಅವಸ್ಥೆ ಕಂಡು ಗಾಬರಿಯೋ ಗಾಬರಿ! ಏನಾಯಿತು ಮಕ್ಕಳೇ? ಎಂದು ಮೈ ನೇವರಿಸಿದಾಗ ನಾನಂತೂ ಗೋಳೋ ಎಂದು ಅತ್ತು ಬಿಟ್ಟೆ. ಬಳಿಕ ಸಮೋಸ ತಿಂದುದನ್ನೂ ಹೇಳಿದೆ. ಕೂಡಲೇ ಕೋಣೆಯಿಂದ ಅಜ್ಜಿ ಹೊರನಡೆದರು. ನಮ್ಮಲ್ಲಿ ಕೋಪ ಮಾಡಿ ಹೋದರೋ? ಎಂದು ನಾವು ಭಾವಿಸಿದೆವು. ಆದರೆ ಐದು ನಿಮಿಷದೊಳಗೆ ಅಜ್ಜಿ ಪುನಃ ಬಂದರು. ಕೈಯಲ್ಲಿ ಒಂದು

ಪಾತ್ರೆ, ಅದರಲ್ಲಿ ಯಾವುದೋ ಸೊಪ್ಪಿನ ರಸವಿತ್ತು. ಹಿತ್ತಿಲಿನಿಂದ ಕಿತ್ತು ತಂದ ಸೊಪ್ಪಿನ ರಸವನ್ನು ರೀಟಾಳಿಗೂ ನನಗೂ ಕುಡಿಸಿದರು. ಮಲಗಲು ಹೇಳಿ ನಮ್ಮಿಬ್ಬರಿಗೂ ಹೊದಿಕೆ ಹೊದಿಸಿದರು. ಬೆಳಗ್ಗೆ ಕಣ್ಣು ಬಿಟ್ಟಾಗ ಏಳು ಗಂಟೆ! ಅಜ್ಜಿ ಅಲ್ಲಿಯೇ ಕುರ್ಚಿಯಲ್ಲಿ ಕುಳಿತು ನಾವು ಏಳುವುದನ್ನೇ ಕಾಯುತ್ತಾ ಕುಳಿತಿದ್ದರು. ಪಾಪ!

ನಮ್ಮ ಹೊಟ್ಟೆನೋವು, ತಳಮಳ ಎಲ್ಲವೂ ಮಾಯವಾಗಿತ್ತು. ನಾವಿಬ್ಬರೂ ಲಗುಬಗೆಯಿಂದ ಎದ್ದಾಗ, ಅಜ್ಜಿ ಸಂತೋಷದಿಂದ "ಈಗ ಹೇಗಿದೆ? ಆಸ್ಪತ್ರೆಗೆ ಹೋಗಬೇಕೇ?" ಎಂದು ವಿಚಾರಿಸಿದರು. ಅಜ್ಜಿಯ ಪ್ರೀತಿ ವಾತ್ಸಲ್ಯವನ್ನು ಕಂಡು ನಮ್ಮ ಮನಸ್ಸು ಮೂಕವಾಯಿತು. "ಅಜ್ಜಿ, ನಮ್ಮನ್ನು ಕ್ಷಮಿಸಿ" ಎಂದಾಗ ಅಜ್ಜಿಯು "ಹುಚ್ಚು ಹುಡುಗಿಯರು, ಕಾಲೇಜಿಗೆ ಹೋಗಬೇಕಿದ್ದರೆ ಸ್ನಾನಕ್ಕೆ ನೀರು ಬಿಸಿಮಾಡಿಟ್ಟಿದ್ದೇನೆ, ಇನ್ನೂ ಆಯಾಸವಿದ್ದರೆ ನಾಳೆ ಹೋದರಾಯಿತು. ನಿನ್ನೆ ರಾತ್ರಿ ನಿಮಗಿಬ್ಬರಿಗೂ ಸ್ವಲ್ಪ ಜ್ವರ ಬಂದಿತ್ತು. ಬಿಸಿ ಗಂಜಿಯೂ, ಲಿಂಬೆಯ ಉಪ್ಪಿನ ಕಾಯಿಯೂ ಇದೆ. ಗಂಜಿ ಬೇಡದಿದ್ದರೆ ....... " ಅಜ್ಜಿ ಮಾತು ಮುಗಿಸುವುದಕ್ಕೆ ಮೊದಲೇ "ನಾವಿಬ್ಬರೂ ಗಂಜಿಕುಡಿಯುತ್ತೇವಜ್ಜಿ" ಎಂದು ಹೇಳಿ ಬೇಗನೆ ಎದ್ದು ಸ್ನಾನಕ್ಕೆ ಓಡಿದೆವು. ಆ ಬಳಿಕ ಬಿಸಿ ಬಿಸಿ ಗಂಜಿಕುಡಿದು ಮಾಡಿದ ಅವಾಂತರವನ್ನು ನೆನೆಯುತ್ತಾ ಕಾಲೇಜಿಗೆ ಹೋದೆವು.

ಅಂದಿನಿಂದ ನಮಗೆ ಅಜ್ಜಿ ಮಾಡಿದ ಊಟ, ತಿಂಡಿ, ಅನ್ನ, ಸಾರು ಎಲ್ಲವೂ ತುಂಬಾ ರುಚಿ! ದೇವರಾಣೆಗೂ ಹೊರಗಿನಿಂದ ಯಾವುದೇ ತಿಂಡಿ ತರಿಸಿ ತಿನ್ನಲಿಲ್ಲ. ಸಿಹಿಯಾದ ಬಿಸಿ ಹಾಲಿಗೆ ಐಸ್ಕ್ರೀಂ ಎಂದೂ ಬಾರದು ಎಂಬುದನ್ನು ಅಜ್ಜಿಗಿಂತ ಹೆಚ್ಚಾಗಿ ಗೆಳತಿಯರ ಮುಂದೆ ನಾವೇ ವಾದಿಸುತ್ತೇವೆ. ಈಗಂತೂ ಈ ಅಜ್ಜಿಯ ಮನೆಯಲ್ಲಿ ಪೇಯಿಂಗ್ ಗೆಸ್ಟಾಗಿ ನಿಂತದ್ದನ್ನು ಭಾಗ್ಯ ಎಂದುಕೊಳ್ಳುತ್ತೇವೆ.

ನನ್ನ ಪತ್ರವನ್ನು ಇಲ್ಲಿಗೆ ಮುಗಿಸುತ್ತೇನೆ.

ನಿನ್ನ ಪತ್ರಕ್ಕಾಗಿ ಕಾಯುತ್ತಿರುವ,

ನಿನ್ನ ಗೆಳತಿ

ಸೌಮ್ಯ

## ಚಟುವಟಿಕೆಗಳು

### ❑ ಸಂದರ್ಭ ಬರೆಯಿರಿ

- ಕೆಳಗಿನ ಮಾತುಗಳನ್ನು ಯಾರು ಯಾರಿಗೆ, ಯಾವಾಗ ಹೇಳಿದರು ಎಂಬುದನ್ನು ಬರೆಯಿರಿ.
  - "ಅಜ್ಜಿ, ನಮ್ಮನ್ನು ಕ್ಷಮಿಸಿ"
  - "ಬನ್ನಿ ಸೇರಿದಷ್ಟು ಊಟ ಮಾಡಿ. ಬಿಸಿ ಗಂಜಿ ಕುಡಿಯಿರಿ"

## ಉತ್ತರ ಬರೆಯಿರಿ

- ಸೌಮ್ಯಳಿಗೆ ಅಜ್ಜಿಯನ್ನು ಕಂಡರಾಗುತ್ತಿರಲಿಲ್ಲ. ಯಾಕೆ?
- ಅಜ್ಜಿ ಗಾಬರಿಯಾದುದೇಕೆ?

## ಪತ್ರ ಬರೆಯಿರಿ

- ನಿಮ್ಮ ಶಾಲೆಯಲ್ಲಿ ಆಚರಿಸಿದ ಯಾವುದಾದರೊಂದು ಕಾರ್ಯಕ್ರಮದ ವಿವರಗಳನ್ನು ದೂರದ ಊರಿನಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ ತಿಳಿಸುವಂತೆ ಪತ್ರ ಬರೆಯಿರಿ.

## ಊಹಿಸಿ ಬರೆಯಿರಿ

- ಅಜ್ಜಿ ಸೌಮ್ಯಳನ್ನು ಗಮನಿಸದೆ ಇರುತ್ತಿದ್ದರೆ ಏನಾಗುತ್ತಿತ್ತು? ಊಹಿಸಿ ಬರೆಯಿರಿ.

## ಚರ್ಚಿಸಿರಿ

- ನಾವು ಆರೋಗ್ಯವಂತರಾಗಿರಲು ಹೇಗಿರುವ ಆಹಾರ ಸೇವಿಸಬೇಕು? ಪರಸ್ಪರ ಚರ್ಚಿಸಿ ಟಿಪ್ಪಣಿ ರೂಪದಲ್ಲಿ ಬರೆಯಿರಿ. ತರಗತಿಯಲ್ಲಿ ಮಂಡಿಸಿರಿ.

## ವಾಕ್ಯ ರಚಿಸಿರಿ

ಅಡಿಗೆರೆ ಎಳೆದ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿರಿ.

- ಅಮ್ಮ ಮಕ್ಕಳನ್ನು <u>ವಾತ್ಸಲ್ಯದಿಂದ</u> ಬೆಳೆಸುತ್ತಾಳೆ.
- ಕಡುಬಿಸಿಲಿನಲ್ಲಿ ದುಡಿಯುವಾಗ <u>ದಣಿವು</u> ಹೆಚ್ಚಾಗುತ್ತದೆ.
- ವಿದ್ಯಾರ್ಥಿಗಳು ಎಷ್ಟು ತಪ್ಪು ಮಾಡಿದರೂ ಅಧ್ಯಾಪಕರು ಅವರನ್ನು ಮನಸಾರೆ <u>ಕ್ಷಮಿಸುತ್ತಾರೆ.</u>
- ಕಾವ್ಯ ಜಾರಿ ಬಿದ್ದುದನ್ನು ನೋಡಿ ಶ್ರಾವ್ಯ <u>ಒಳಗೊಳಗೇ</u> ನಕ್ಕಳು.
- ತನ್ನ ಗೊಂಬೆಯ ಕೈಮುರಿದುದನ್ನು ಕಂಡು ಮಗು <u>ಗೋಳೋ ಎಂದು ಅತ್ತಿತು.</u>

## ವಿದ್ಯಾರ್ಥಿಗಳು ಗಳಿಸುವ ಕಲಿಕಾ ಸಾಮರ್ಥ್ಯಗಳು

- ಆಲಿಸಿದ ವಿಚಾರಗಳನ್ನು ತಾರ್ಕಿಕವಾಗಿ ವಿಶ್ಲೇಷಿಸಿ ಅಭಿಪ್ರಾಯವನ್ನು ಮೌಖಿಕವಾಗಿ ಪ್ರಕಟಿಸುವುದು.
- ರಾಗ ತಾಳ ಭಾವದೊಂದಿಗೆ ಮಂಡಿಸಿದ ಕವಿತೆಗಳನ್ನು ಆಲಿಸಿ ಆಸ್ವಾದಿಸುವುದು.
- ಗದ್ಯ, ಪದ್ಯವನ್ನು ಭಾವಪೂರ್ಣವಾಗಿ ಉಚ್ಚಾರಣ ಶುದ್ಧಿಯೊಂದಿಗೆ ನಿರರ್ಗಳವಾಗಿ ಓದುವುದು.
- ಸ್ವಂತ ಆಸಕ್ತಿಯಿಂದ ಪುಸ್ತಕ ಮತ್ತು ಇತರ ವಾಚನ ಸಾಮಗ್ರಿಗಳನ್ನು ಕಂಡುಕೊಂಡು ಓದುವುದು.
- ವಾಚನಾನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಕೇಳಿದ, ಓದಿದ ವಿಚಾರಗಳನ್ನು ಅರ್ಥೈಸಿ ಪ್ರಧಾನ ಆಶಯಗಳನ್ನು ತಪ್ಪಿಲ್ಲದೆ ಬರೆಯುವುದು, ಹೇಳುವುದು, ಭಾಷಣ ಮಾಡುವುದು.
- ದಿನಚರಿ, ಆತ್ಮಕಥೆ, ಅನುಭವ ಟಿಪ್ಪಣಿ, ಜೀವನ ಚರಿತ್ರೆ ಮೊದಲಾದ ಲೇಖನಗಳನ್ನು ಓದಿ ಸ್ವಂತ ಅನುಭವಗಳನ್ನು ಸೇರಿಸಿ ಸ್ವಯಂ ರಚನೆ ಮಾಡುವುದು.
- ಸಂದರ್ಭಾನುಸಾರ ವಿಭಿನ್ನ ವ್ಯವಹಾರ ರೂಪಗಳನ್ನು ಆಯ್ದು ರಚನೆಗಳಲ್ಲಿ ತೊಡಗುವುದು ಮತ್ತು ಇನ್ನೊಂದು ವ್ಯವಹಾರ ರೂಪಕ್ಕೆ ಬದಲಾಯಿಸುವುದು.
- ಸೃಜನಾತ್ಮಕ ಕೃತಿಗಳನ್ನು ತಯಾರಿಸುವುದು, ಅವುಗಳನ್ನು ತರಗತಿಯ ಭಿತ್ತಿ ಪತ್ರಿಕೆ ಹಸ್ತಪತ್ರಿಕೆಗಳಲ್ಲಿ ಪ್ರಕಟಿಸುವುದು.
- ವಿಭಿನ್ನ ಭಾಷಾನುಭವಗಳನ್ನು ಗಳಿಸಿ, ಪದಗಳ ಪ್ರಯೋಗಗಳೇ ಮೊದಲಾದವುಗಳನ್ನು ಬಳಸಿಕೊಂಡು ರಚನೆಗಳನ್ನು ಮಾಡುವುದು.
- ತನ್ನ ಮತ್ತು ಇತರರ ರಚನೆಗಳನ್ನು ಹೋಲಿಸಿ ತನ್ನ ರಚನೆಗಳನ್ನು ಉತ್ತಮ ಪಡಿಸುವುದು.
- ಕತೆ, ಕವಿತೆ, ಲೇಖನಗಳಲ್ಲಿ ಸಂದರ್ಭಾನುಸಾರ ಲೇಖನ ಚಿಹ್ನೆಗಳನ್ನು ಬಳಸುವುದು.
- ರಾಗ ತಾಳ, ಭಾವಗಳಿಂದ ಕವಿತೆಗಳನ್ನು ಹಾಡುವುದು.

# 3. ಆಸರೆ

ಈ ಭೂಮಿಯಲ್ಲಿ ಎಲ್ಲರಿಗೂ ಜೀವಿಸುವ ಹಕ್ಕಿದೆ. ಎಲ್ಲ ಜೀವಜಾಲಗಳು ಪರಸ್ಪರ ಆಶ್ರಯಿಸಿ ಬದುಕುತ್ತವೆ. ದುರ್ಬಲರನ್ನು ಕೈಹಿಡಿದು ಮುನ್ನಡೆಸಬೇಕಾದುದು ಮಾನವನ ಪರಮಧರ್ಮ. ನನ್ನಂತೆಯೇ ಪರರು ಎಂಬುದನ್ನು ಅರಿತು ಅವರ ಬದುಕಿಗೆ ನಾವು ದಾರಿದೀಪವಾಗಬೇಕು. ತನ್ನ ಸುಖಕ್ಕಾಗಿ ಅನ್ಯರ ಸುಖವನ್ನು ಕೆಡಿಸಬಾರದೆಂಬ ತಿಳುವಳಿಕೆ ನಮ್ಮಲ್ಲಿ ಬೆಳೆಯಬೇಕಾಗಿದೆ.



# ನಿಸ್ವಾರ್ಥ ಸೇವೆ

ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕಾದುದು ನಮ್ಮ ಧರ್ಮ. ನಾವು ಮಾಡುವ ಸಹಾಯಕ್ಕೆ ಯಾವುದೇ ಫಲವನ್ನು ಬಯಸಬಾರದು. ಇಂತಹ ನಿಸ್ವಾರ್ಥ ಸೇವೆಯು ನಮ್ಮ ಬದುಕಿನ ಆದರ್ಶವಾಗಿರಬೇಕು. ಆಗ ಉತ್ತಮ ಸಮಾಜವು ರೂಪುಗೊಳ್ಳುವುದು.

ಶಂಕರ ಬೆಂಗಳೂರು ಬೋರ್ಡ್ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿ. ಎಂದಿನಂತೆ ಬೆಳಗಾತ ಎದ್ದು ನಿತ್ಯ ಕೆಲಸಗಳನ್ನು ಮುಗಿಸಿ ಶಾಲೆಯ ದಾರಿ ಹಿಡಿದನು.

ಜನನಿಬಿಡವಾದ ಪ್ರದೇಶವದು. ರಸ್ತೆಯ ತುಂಬಾ ವಾಹನಗಳ ಭರಾಟೆ. ಅದೇ ಸಮಯ ನೀಲಿ ಸೀರೆ, ಕಪ್ಪು ಕನ್ನಡಕ ಧರಿಸಿದ್ದ ಹೆಂಗಸೊಬ್ಬಳು ಎದುರಿಗೆ ಸಿಕ್ಕಿದಳು. ಅವಳು ತನ್ನ ಕೈಯಲ್ಲಿದ್ದ ಕೋಲನ್ನು ನೆಲಕ್ಕೆ ಬಡಿಯುತ್ತಾ ರಸ್ತೆಯ ಅಂಚಿನಲ್ಲಿ ತಡವರಿಸುತ್ತಾ ನಡೆದು ಹೋಗುತ್ತಿದ್ದಳು. ಶಂಕರನ ಎದೆ ಢವಗುಟ್ಟ ತೊಡಗಿತು.




ಕಣ್ಣುಕಾಣದ ಈ ಹೆಂಗಸು ಇಷ್ಟೊಂದು ಜನಜಂಗುಳಿಯ ಮಧ್ಯೆ ಕೇವಲ ಒಂದು ಕೋಲಿನ ಸಹಾಯದಿಂದ ಹೇಗೆ ರಸ್ತೆ ದಾಟುತ್ತಾಳೆ? ಎಂದು ಯೋಚಿಸುತ್ತಾ ನಿಂತ.

ಹೆಂಗಸು ರಸ್ತೆ ದಾಟಲು ಪ್ರಾರಂಭಿಸಿದಳು. ಇದ್ದಕ್ಕಿದ್ದಂತೆಯೇ ವೇಗವಾಗಿ ಬಂದ ದ್ವಿಚಕ್ರ ವಾಹನವೊಂದು ಅವಳನ್ನು ಸವರಿಕೊಂಡು ಹೋಯಿತು. ಪಾಪ! ಆಕೆ ದೊಪ್ಪನೆ ಬಿದ್ದು ಬಿಟ್ಟಳು.

ಶಂಕರನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಓಡೋಡಿ ಬಂದವನೇ ಆಕೆಯನ್ನು ಎಬ್ಬಿಸಿದ. ಅದೃಷ್ಟವಶಾತ್ ಆಕೆಗೆ ಯಾವುದೇ ಏಟಾಗಿರಲಿಲ್ಲ. ಬಿದ್ದ ಕೋಲನ್ನು ಹೆಕ್ಕಿ ಕೈಗೆ ಕೊಟ್ಟು

ಮುನ್ನಡೆಸುತ್ತಾ ಅವಳು ಕೆಲಸಮಾಡುವ ಸ್ಥಳದವರೆಗೆ ತಲುಪಿಸಿ ತನ್ನ ಶಾಲೆ ಸೇರಿದ. ತರಗತಿಯಲ್ಲಿದ್ದರೂ ಅವನ ಮನಸ್ಸು ಆ ಹೆಂಗಸಿನ ದಯನೀಯ ಸ್ಥಿತಿಯನ್ನು ನೆನಪಿಸುತ್ತಾ ಮರುಕಪಡುತ್ತಿತ್ತು.

ಶಂಕರನ ಅಜ್ಜಿಗೂ ಕಣ್ಣು ಕಾಣಿಸುತ್ತಿರಲಿಲ್ಲ. ಅವನು ಓದುವಾಗ ಆಕೆ ಹತ್ತಿರದಲ್ಲಿ ಕುಳಿತು ಕೇಳಿಕೊಳ್ಳುತ್ತಿದ್ದಳು. ತನಗೆ ತಿಳಿದ ಕೆಲವು ಕತೆಗಳನ್ನು ಪುಟ್ಟ ಶಂಕರನಿಗೆ ಅವಳು ಹೇಳುತ್ತಿದ್ದಳು. ದೃಷ್ಟಿ ಕಾಣಿಸದಿದ್ದರೂ ಅಜ್ಜಿಯ ನೆನಪು ಶಕ್ತಿಗೆ ಮೆಚ್ಚಲೇ ಬೇಕು. ಪುರಾಣ ಕತೆಗಳ ಭಂಡಾರವೇ ಅವಳಲ್ಲಿತ್ತು. ಆಕೆಯ ಕೈಚೀಲದಲ್ಲಿ ಕೆಲವು ನಾಣ್ಯಗಳಿದ್ದುವು. ಅವುಗಳನ್ನು ಬೆರಳಿನಿಂದ ಮುಟ್ಟಿನೋಡಿ, 'ಇದು ರೂಪಾಯಿ, ಅರ್ಧ ರೂಪಾಯಿ, ಪಾವಲಿ, ನಾಲ್ಕಾಣೆ, ಎಂಟಾಣೆ' ಎಂದೆಲ್ಲಾ ಗುರುತಿಸುತ್ತಿದ್ದಳು. ಅಂಗಳಕ್ಕೆ ಬೀದಿಗೆ ಹೋಗಬೇಕಾದರೆ ಶಂಕರ ಆಕೆಯ ಸಹಾಯಕ್ಕೆ ಧಾವಿಸುತ್ತಿದ್ದ. ಇವೆಲ್ಲಾ ಅವನ ನೆನಪಿಗೆ ಬಂತು.

ಮಾರನೆಯ ದಿನವೂ ಆ ಕಪ್ಪು ಕನ್ನಡಕದ ಹೆಂಗಸು ದಾರಿಯಲ್ಲಿ ಸಿಕ್ಕಿದಳು. ಅತ್ತ ಕಡೆಗೆ ಹೋಗುತ್ತಿದ್ದ ಯುವತಿಯೊಬ್ಬಳು, ಆಕೆಯನ್ನು ಕರೆದೊಯ್ಯುತ್ತಿದ್ದಳು. ಅದೇ ನೀಲಿ ಬಣ್ಣದ ಉಡುಪಿನ ಮತ್ತಿಬ್ಬರು ಹೆಂಗಸರು ಜತೆಯಾದಾಗ ಅವರೆಲ್ಲರೂ ಯಾವುದೋ ಕಾರ್ಖಾನೆಯಲ್ಲಿ ಕೆಲಸ ಮಾಡುವವರು ಎಂಬುದನ್ನು ಶಂಕರ ಊಹಿಸಿದ. ಕಣ್ಣು ಕಾಣಿಸದಿದ್ದರೂ ಇತರರಿಗೆ ಭಾರವಾಗದೇ ತನ್ನ ಕಾಲ ಮೇಲೆ ತಾನು ನಿಲ್ಲಬೇಕೆಂಬ ಈ ಹೆಂಗಸಿನ ಅತ್ಮವಿಶ್ವಾಸಕ್ಕೆ ಅವನು ಅಚ್ಚರಿಪಟ್ಟ.

ಅಂದು ಕೂಡಾ ಆ ಕಪ್ಪು ಕನ್ನಡಕದ ಹೆಂಗಸು ದಾರಿಯಲ್ಲಿ ಸಿಕ್ಕಿದಳು. ಕೂಡಲೇ ಶಂಕರ ತಾನಾಗಿಯೇ ಹೋಗಿ ಆಕೆಯ ಕೋಲು ಹಿಡಿದುಕೊಂಡ. ಅವಳು : "ಯಾರು? ಯಾರದು? ನನ್ನ ಕೋಲನ್ನು ಆಧರಿಸಿದವರು?" ಎಂದು ಕೇಳಿದಳು. ಆಗ ಅವನು; "ನಾನು, ಶಂಕರ, ಶಾಲಾ ಬಾಲಕ. ನಿಮ್ಮನ್ನು ಫ್ಯಾಕ್ಟರಿಗೆ ತಲುಪಿಸುತ್ತೇನೆ" ಎಂದನು. ಸುಮಾರು ಹದಿನೈದು ಇಪ್ಪತ್ತು ನಿಮಿಷಗಳ ದಾರಿಯನ್ನು ಕ್ರಮಿಸಿ, ಹೆಂಗಸನ್ನು ಫ್ಯಾಕ್ಟರಿಗೆ ತಲುಪಿಸಿ ಎಂದಿನಂತೆ ಶಂಕರ ಶಾಲೆಗೆ ಹೋದನು.

ಅಂದಿನಿಂದ ಪ್ರತಿದಿನ ರಸ್ತೆಗೆ ಬಂದ ಕೂಡಲೇ ಶಂಕರನ ಕಣ್ಣುಗಳು ಆ ಹೆಂಗಸಿಗಾಗಿ ಅರಸುತ್ತಿದ್ದುವು. ಕೋಲು ಹಿಡಿದುಕೊಂಡು ಆಕೆಯನ್ನು ಕರೆದೊಯ್ಯುವುದು ಅವನಿಗೆ ಸಂತೋಷದ ಕೆಲಸವೆನ್ನಿಸಿತು. ಅವರೊಳಗೆ ಪರಸ್ಪರ ಪರಿಚಯವಾಯಿತು. ನಡೆದುಕೊಂಡು ಹೋಗುವಾಗ ರಸ್ತೆಯುದ್ದಕ್ಕೂ ಇರುವ ಎಲ್ಲಾ ವಿಚಾರಗಳನ್ನು ಚಾಚೂ ತಪ್ಪದೆ ಅವನು ಹೆಂಗಸಿಗೆ ವಿವರಿಸುತ್ತಿದ್ದ. ಸಂಕ್ರಾತಿಯ ಮರುದಿನ ಎಳ್ಳು ಬೆಲ್ಲದ ಎರಡು ಪೊಟ್ಟಣಗಳನ್ನು ಶಂಕರನಿಗೆ ಅವಳು ತಂದು ಕೊಟ್ಟಿದ್ದಳು.

ಹೀಗಿರುವಾಗ ಒಂದು ಅನಿರೀಕ್ಷಿತ ಘಟನೆ ನಡೆಯಿತು. ಪ್ರಸಿದ್ಧ ದಿನಪತ್ರಿಕೆಯೊಂದು ತನ್ನ ಮುಖಪುಟದಲ್ಲಿ ವರ್ಣಛಾಯಾ ಚಿತ್ರವೊಂದನ್ನು ಪ್ರಕಟಿಸಿತ್ತು.

"ಇಂದು ವಿಕಲಚೇತನರ ದಿನ. ನೀವು ಅವರಿಗಾಗಿ ಏನು ಸಹಾಯ ಮಾಡಿದ್ದೀರಿ?" ಎಂಬ ಶೀರ್ಷಿಕೆ ನೀಡಿತ್ತು. ಅದರ ಕೆಳಗೆ ಕುರುಡು ಹೆಂಗಸನ್ನು ಶಂಕರ ಕರೆದೊಯ್ಯುತ್ತಿದ್ದ ಚಿತ್ರ. ಛಾಯಾಗ್ರಾಹಕ ಇದನ್ನು ಹೇಗೋ ಸೆರೆಹಿಡಿದು ದಿನಪತ್ರಿಕೆಯಲ್ಲಿ ಪ್ರಕಟಿಸಿದ್ದ. ಶಂಕರನ ಶಾಲೆಯ ಮುಖ್ಯೋಪಾಧ್ಯಾಯಿನಿ ಹಾಗೂ ಅಧ್ಯಾಪಕ ವೃಂದದವರಿಗೆ ಸಂತೋಷವೇ ಸಂತೋಷ. ನಮ್ಮ ಶಾಲಾ ಹುಡುಗನ ಚಿತ್ರ ದಿನಪತ್ರಿಕೆಯೊಂದರಲ್ಲಿ ಬಂದಿದೆ ಎಂದು ತಿಳಿದು ಅವನನ್ನು ಅಭಿನಂದಿಸಲು ತೀರ್ಮಾನಿಸಿದರು. ಶಂಕರನಿಗಾದರೋ ಇದರ ಅರಿವೇ ಇರಲಿಲ್ಲ. ಅವನು ಎಂದಿನಂತೆ ಹೆಂಗಸನ್ನು ಫ್ಯಾಕ್ಟರಿಗೆ ಬಿಟ್ಟು ಬಂದ. ಶಾಲೆಗೆ ತಲುಪಿದಾಗ ಸಂತಸದ ವಾತಾವರಣ ನೆಲೆಗೊಂಡಿತ್ತು. ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲ ಅವನನ್ನು ಮುತ್ತಿಕೊಂಡರು. ಅವನತ್ತ ಓಡಿ ಬಂದು ಕೈ ಕುಲುಕಿದರು. ಅಭಿನಂದನೆಗಳ ಮಹಾಪೂರವೇ ಹರಿದು ಬಂತು. ತರಗತಿಯಲ್ಲಿ ತನ್ನನ್ನು ಗೋಳು ಹೊಯ್ದುಕೊಳ್ಳುತ್ತಿದ್ದ ತುಂಟ ಹುಡುಗರು ಕೂಡಾ ಅವನ ಈ ಉತ್ತಮ ಕಾರ್ಯಕ್ಕೆ ಮನಬಿಚ್ಚಿ ಹೊಗಳಿದರು.



ಶಾಲಾ ಪ್ರಾರ್ಥನಾ ಸಭೆಯಲ್ಲಿ ಅವನಿಗೆ ವಿಶೇಷವಾಗಿ ಅಭಿನಂದನೆಗಳನ್ನು ಸಮರ್ಪಿಸಿದರು, ತನ್ನ ನಿಸ್ವಾರ್ಥ ಸೇವೆಯ ಮೂಲಕ ಶಾಲೆಗೆ ಕೀರ್ತಿ ತಂದಿದ್ದ ಶಂಕರನನ್ನು ಮುಖ್ಯೋಪಾಧ್ಯಾಯಿನಿ ಮನಸಾರೆ ಹೊಗಳಿದರು. "ನೀವೆಲ್ಲ ಶಂಕರನಂತೆ ಸಮಾಜಸೇವೆಯನ್ನು ಮಾಡಿರಿ, ಆದರ್ಶ ವ್ಯಕ್ತಿಗಳಾಗಿ ಬಾಳಿರಿ" ಎಂದು ಮಾತು ಮುಗಿಸಿದರು.

## ಚಟುವಟಿಕೆಗಳು

### ❑ ಉತ್ತರ ಬರೆಯಿರಿ

- ಶಂಕರನ ಎದೆ ಢವಗುಟ್ಟಲು ಕಾರಣವೇನು?
- ಶಂಕರನು ಕಪ್ಪು ಕನ್ನಡಕದ ಹೆಂಗಸಿಗೆ ಯಾವ ರೀತಿಯಲ್ಲಿ ಸಹಾಯ ಮಾಡುತ್ತಿದ್ದನು?
- ಶಾಲಾ ಪ್ರಾರ್ಥನಾ ಸಭೆಯಲ್ಲಿ ಶಂಕರನನ್ನು ಯಾಕೆ ಅಭಿನಂದಿಸಲಾಯಿತು?

### ❑ ಕ್ರಮೀಕರಿಸಿ ಬರೆಯಿರಿ

ಕತೆಯನ್ನು ಓದಿದಿರಲ್ಲವೇ? ಕತೆಯ ಕೆಲವು ಪ್ರಧಾನ ಘಟನೆಗಳನ್ನು ಕೆಳಗೆ ಕೊಡಲಾಗಿದೆ. ಅವುಗಳನ್ನು ಕ್ರಮೀಕರಿಸಿ ಬರೆಯಿರಿ.

- ಶಂಕರನು ಕುರುಡಿಯಾದ ಹೆಂಗಸನ್ನು ಕರೆದೊಯ್ಯುತ್ತಿದ್ದ ಸುದ್ದಿ ಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು.
- ಪ್ರತಿ ದಿನವೂ ಹೆಂಗಸನ್ನು ಕಾರ್ಖಾನೆಯವರೆಗೆ ಕೊಂಡುಹೋಗಿ ಬಿಡುತ್ತಿದ್ದ.
- ಶಂಕರನು ಎಂದಿನಂತೆ ಶಾಲೆಗೆ ಹೋಗುತ್ತಿರುವಾಗ ಕೋಲು ಹಿಡಿದು ದಾಟುವ ಹೆಂಗಸೊಬ್ಬಳನ್ನು ಕಂಡನು.
- ಅಧ್ಯಾಪಕರೂ ಸಹಪಾಠಿಗಳೂ ಶಂಕರನನ್ನು ಅಭಿನಂದಿಸಿದರು.
- ವೇಗವಾಗಿ ಓಡುತ್ತಿದ್ದ ದ್ವಿಚಕ್ರ ವಾಹನವೊಂದು ಕಣ್ಣು ಕಾಣಿಸದ ಹೆಂಗಸನ್ನು ಬೀಳಿಸಿತು.
- ಅವರು ನಡೆದುಕೊಂಡು ಹೋಗುತ್ತಿರುವಾಗ ಕ್ಷೇಮ ಸಮಾಚಾರಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು.
- ಶಂಕರನು ರಸ್ತೆಯಲ್ಲಿ ಬಿದ್ದ ಹೆಂಗಸನ್ನು ಓಡಿ ಬಂದು ಎಬ್ಬಿಸಿದನು.
- ಕಷ್ಟದಲ್ಲಿರುವವರಿಗೆ ತನ್ನಿಂದಾದ ಸಹಾಯ ಮಾಡುತ್ತಾ ಮಾದರಿ ವ್ಯಕ್ತಿಯಾಗಿ ಬಾಳಿದನು.
- ಹೆಂಗಸಿನ ದೀನಸ್ಥಿತಿಯನ್ನು ಕಂಡು ಶಂಕರನಿಗೆ ತನ್ನ ಅಜ್ಜಿಯ ನೆನಪಾಯಿತು.

### ❑ ಶೀರ್ಷಿಕೆ ನೀಡಿರಿ

- ಈ ಕತೆಗೆ ಸೂಕ್ತವಾದ ಬೇರೆ ಶೀರ್ಷಿಕೆಗಳನ್ನು ನೀಡಿರಿ.

### ❑ ಸಂಭಾಷಣೆ ಬರೆಯಿರಿ

- ಹೆಂಗಸು ಮತ್ತು ಶಂಕರ ನಡೆದುಕೊಂಡು ಹೋಗುತ್ತಿರುವಾಗ ಏನು ಮಾತನಾಡಿರಬಹುದು? ಊಹಿಸಿ ಸಂಭಾಷಣ ರೂಪದಲ್ಲಿ ಬರೆಯಿರಿ.

## ❑ ಟಿಪ್ಪಣಿ ಬರೆಯಿರಿ

- ಕಣ್ಣು ಎಂಬುದು ನಮ್ಮ ಶರೀರದ ಪ್ರಧಾನ ಅಂಗ. ಅದು ಕಾಣಿಸದಿದ್ದರೆ ನಾವು ಯಾವೆಲ್ಲಾ ತೊಂದರೆಗಳನ್ನು ಅನುಭವಿಸಬೇಕಾಗಬಹುದು? ಟಿಪ್ಪಣಿ ರೂಪದಲ್ಲಿ ಬರೆದು ಮಂಡಿಸಿರಿ.

## ❑ ಅನುಭವ ಕಥನ ಬರೆಯಿರಿ

- ನೀವು ನಿಮ್ಮ ಜೀವನದಲ್ಲಿ ಕಷ್ಟದಲ್ಲಿರುವವರಿಗೆ ಸಹಾಯ ಮಾಡಿರುವಿರಾ? ಯಾವ ರೀತಿಯ ಸಹಾಯ ಮಾಡಿರುವಿರಿ? ಇದರ ಬಗ್ಗೆ ನಿಮ್ಮ ಅನುಭವವನ್ನು ಬರೆಯಿರಿ.

## ❑ ಪದ ರಚಿಸಿರಿ

- ಇಲ್ಲಿರುವ ಅಕ್ಷರಗಳನ್ನು ಉಪಯೋಗಿಸಿ ಅರ್ಥಪೂರ್ಣ ಪದಗಳನ್ನು ರಚಿಸಿರಿ.

ಉದಾ : ಆತ್ಮವಿಶ್ವಾಸ

| | | | | |
|---|---|---|---|---|
| ಸ್ವಾ | ವ್ಯ | ಅ | ಷ್ಟಿ | ದ್ಯಾ |
| ವಿ | ದ್ಯೆ | ನಿ | ಯ | ಸ |
| ಪ್ರ | ಕೃ | ಆ | ರೀ | ನೆ |
| ಭ್ಯಾ | ತ್ಮ | ಷ್ಟ | ಧ್ಯಾ | ಕ್ತಿ |
| ರ | ಶ್ವಾ | ರ್ಥ | ಸ್ಮ | ಮ |
| ಉ | ದ್ಧ | ಸ್ತೆ | ತಿ | ಸಿ |

.................................... ................................ ................................

.................................... ................................ ................................

## ❑ ಕರಪತ್ರ ತಯಾರಿಸಿರಿ

ರಸ್ತೆ ಸುರಕ್ಷತೆಯ ನಿಮಯಗಳನ್ನು ಪಾಲಿಸುವುದು ನಮ್ಮೆಲ್ಲರ ಕರ್ತವ್ಯ. ಈ ನಿಯಮಗಳ ಬಗ್ಗೆ ಜನಜಾಗೃತಿ ಮೂಡಿಸಲು ಸೂಕ್ತವಾದ ಕರಪತ್ರವೊಂದನ್ನು ತಯಾರಿಸಿರಿ.

# ಚೋಮನ ಮಕ್ಕಳು

ನಮ್ಮ ಸಮಾಜದಲ್ಲಿ ಬಡವರು, ಅವಿದ್ಯಾವಂತರೂ ಆದ ಅದೆಷ್ಟೋ ಜನರು ಶ್ರೀಮಂತರ ತುಳಿತಕ್ಕೆ ಒಳಗಾಗುತ್ತಿದ್ದಾರೆ. ಮುಂದೆ ಸಾಗುತ್ತಿರುವವರು ಹಿಂದೆ ಇರುವವರನ್ನು ಕಣ್ಣೆತ್ತಿಯೂ ನೋಡುವುದಿಲ್ಲ. ಕೆಲವೊಮ್ಮೆ ಅವರ ಶಾರೀರಿಕ ಸಾಮರ್ಥ್ಯಗಳನ್ನು ದುರಪಯೋಗಪಡಿಸುತ್ತಾರೆ. ಇಂತಹ ಶ್ರಮಿಕ ವರ್ಗದ ಜನರೂ ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆತು ಬಾಳಬೇಕು.

ಕಣ್ಣಿನ ಒಳಗೆ ನೋವಿರುವವರು
ಮಣ್ಣಿನ ಒಳಗೆ ಮುಖವಿಟ್ಟವರು
ತಾಯಿಯನಗಲಿದ ಮಕ್ಕಳು ನಾವು
ನೋವನಪ್ಪಿದವರು।

ಉಕ್ಕಿನ ಮಯ್ಯಿ ಹೂವಿನ ಮನಸು
ಮೂಡುವ ಭೂಮಿಯ ಗೇಣಿಯ ಕನಸು
ಭೂತಾಯಿಯ ಮಲಮಕ್ಕಳು ನಾವು
ಚೋಮನ ಎಲುಬುಗಳು।

ಒಡೆಯರ ಸುಂದರ ತೋಟದ ಒಳಗೆ
ಅರಳುವ ಹೂವಿನ ದಳ ದಳದಲ್ಲಿ
ಅಪ್ಪನ ಬೆವರಿನ ರಕ್ತವು ಸೋರಿ
ಕೆಂಪಾದವು ಹೂವು।

ದಣಿಗಳ ಹಬ್ಬದ ಊಟಕ್ಕಾಗಿ
ಖಂಡವ ಕಿತ್ತುಕೊಟ್ಟವರು
ನೆಲದಾಧಾರ ತಪ್ಪಿದ ಜನರು
ಮುಗಿಲಿನ ಆಸರೆ ಸಿಗದವರು।

ಭೂಮಿ ಬೆಟ್ಟ ನೀಲಿಯ ಬಾನಿಗೆ
ನಮ್ಮಯ ನಾಡಿನ ಎಲ್ಲ ಜನತೆಗೆ
ಚೋಮನ ಹೆಸರು ಕಥೆ ಗೊತ್ತು
ಚೋಮನ ಮಕ್ಕಳೆ ಹೇಳುವ ಕಥೆಯನು
ಕೇಳಿರಿ ಸ್ವಾಮಿ ಈ ಹೊತ್ತು।

*ಡಾ। ಜಿ. ಸಿದ್ಧಲಿಂಗಯ್ಯ*



## ಚಟುವಟಿಕೆಗಳು

### ❑ ಹಾಡಿರಿ

- ಕವಿತೆಯನ್ನು ರಾಗವಾಗಿ ಹಾಡಿರಿ.

### ❑ ಶೀರ್ಷಿಕೆ ನೀಡಿರಿ

- ಈ ಕವಿತೆಗೆ ಸೂಕ್ತವಾದ ಇನ್ನೊಂದು ಶೀರ್ಷಿಕೆಯನ್ನು ನೀಡಿರಿ.

### ❑ ಚರ್ಚಿಸಿರಿ

ಕೆಳಗೆ ಕವಿತೆಯ ಕೆಲವು ಸಾಲುಗಳನ್ನು ಕೊಡಲಾಗಿದೆ. ಅದರ ಆಶಯದ ಕುರಿತು ಚರ್ಚಿಸಿರಿ.

- ಕಣ್ಣಿನ ಒಳಗೆ ನೋವಿರುವವರು, ಮಣ್ಣಿನ ಒಳಗೆ ಮುಖವಿಟ್ಟವರು
- ಭೂತಾಯಿಯ ಮಲಮಕ್ಕಳು ನಾವು ಚೋಮನ ಎಲುಬುಗಳು
- ಅಪ್ಪನ ಬೆವರಿನ ರಕ್ತವು ಸೋರಿ ಕೆಂಪಾದುವು ಹೂವು.

### ❑ ಉತ್ತರ ಬರೆಯಿರಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

- ಚೋಮನ ಮಕ್ಕಳ ಕುರಿತು ಕವಿ ಏನೆಂದು ಹೇಳಿದ್ದಾರೆ?
- ಚೋಮನು ತನ್ನ ಯಜಮಾನನ ಸುಖಕ್ಕಾಗಿ ಏನು ಮಾಡಿದನು?
- ಚೋಮನ ಕತೆ ತಿಳಿದವರು ಯಾರೆಲ್ಲ?

### ❑ ಟಿಪ್ಪಣಿ ಬರೆಯಿರಿ

ಚೋಮನ ಮಕ್ಕಳಂತಹ ಬಡವರು, ಶ್ರಮಜೀವಿಗಳು ನಿಮ್ಮ ಪರಿಸರದಲ್ಲೂ ಇರಬಹುದಲ್ಲವೇ? ಅಂತಹವರ ಬದುಕಿನ ಬಗ್ಗೆ ಟಿಪ್ಪಣಿ ತಯಾರಿಸಿ ಮಂಡಿಸಿರಿ.

### ❑ ಮನವಿ ಪತ್ರ ಬರೆಯಿರಿ

ನಿಮ್ಮ ಊರಿನಲ್ಲಿ ಚೋಮನ ಮಕ್ಕಳಂತೆ ಬಹಳ ಕಷ್ಟದಲ್ಲಿ ಜೀವಿಸುವ ವಸತಿಹೀನರು ಇರುವರಲ್ಲವೇ? ಅವರಿಗೆ ಮನೆ ನಿರ್ಮಿಸಿ ಕೊಡುವಂತೆ ಪಂಚಾಯತ್ ಅಧ್ಯಕ್ಷರನ್ನು ಕೋರುತ್ತಾ ಮನವಿಯೊಂದನ್ನು ತಯಾರಿಸಿರಿ.

### ❑ ಪದ ಹುಡುಕಿರಿ

ಕೆಳಗೆ ಕೆಲವು ಪದಗಳನ್ನು ಕೊಡಲಾಗಿದೆ. ಆ ಪದಗಳಲ್ಲಿರುವ ಅಕ್ಷರಗಳನ್ನು ಪುನಃ ಕ್ರಮೀಕರಿಸಿದರೆ ಬೇರೆ ಪದಗಳು ಸಿಗುತ್ತವೆ. ಅವುಗಳನ್ನು ಕಂಡುಹಿಡಿದು ಬರೆಯಿರಿ.

ತಾಯಿಯನಗಲಿದ – ನಯ, ........................, ............................, ..............................

ಕಬ್ಬಿಣದದಿರು – .............................., .............................., ..................................

ಮಾನಸಪುತ್ರ – ..............................., ..............................., .................................

# ಬೇಸ್ತು ಬಿದ್ದ ಕಳ್ಳರು

ನಮ್ಮ ಸಂಸ್ಕೃತಿಯಲ್ಲಿ ಹಿರಿಯರಿಗೆ ಅತ್ಯಂತ ಗೌರವದ ಸ್ಥಾನವಿದೆ. ಅವರ ಹಿತನುಡಿಗಳು, ಧೈರ್ಯದ ಮಾತುಗಳು, ಕಿರಿಯರ ಧೈರ್ಯವನ್ನೂ, ಜೀವನೋತ್ಸಾಹವನ್ನೂ ಹೆಚ್ಚಿಸುತ್ತವೆ. ಅನುಭವಗಳ ಖನಿಯಾಗಿರುವ ಹಿರಿಯರು ಮನೆಯಲ್ಲಿದ್ದರೆ ಅದೇ ಒಂದು ಭಾಗ್ಯ.

ನಮಗೆಲ್ಲ ಸಂಭ್ರಮವೋ ಸಂಭ್ರಮ. ಈ ಸಲದ ರಜಾ ದಿನಗಳನ್ನು ದಿಂಡಿಗಲ್‌ನಲ್ಲಿ ಕಳೆಯುವ ಉದ್ದೇಶ. ಅಲ್ಲಿಯೇ ಅಜ್ಜ ನೆಲೆಸಲು ನಿರ್ಧರಿಸಿದ್ದಾರೆ. ಮದರಾಸಿನ ತೇವದ ಸಮುದ್ರದ ಹವೆ ಅಜ್ಜನಿಗೆ ಒಗ್ಗದೆಂದು ಡಾಕ್ಟರ್ ಅಭಿಪ್ರಾಯ. ಅದಕ್ಕೇ ಅವರು ದಿಂಡಿಗಲ್‌ನ ಹವೆ ಅಜ್ಜನಿಗೆ ತುಂಬಾ ಒಳ್ಳೆಯದೆಂದು ಶಿಫಾರಸು ಮಾಡಿದ್ದಾರೆ.

ಕೊಡೈಕೆನಾಲ್ ಎಂಬ ತಂಪಾದ ಹವೆಯ ಬೆಟ್ಟದ ಮೇಲಿನ ಊರಿಗೆ ಸಮೀಪದಲ್ಲಿಯೇ ಇರುವುದು ದಿಂಡಿಗಲ್. ಕೊಡೈಕೆನಾಲ್‌ನಿಂದ ನಿತ್ಯವೂ ಹಣ್ಣುಗಳು, ತರಕಾರಿಗಳು ಲಾರಿಗಳಲ್ಲಿ ಮತ್ತು ಎತ್ತಿನ ಬಂಡಿಗಳಲ್ಲಿ ದಿಂಡಿಗಲ್ ಮಾರುಕಟ್ಟೆಗೆ ಬರುತ್ತಿದ್ದವು. ದಿಂಡಿಗಲ್‌ನಲ್ಲಿಯೇ ರುಚಿಕರ ಬಾಳೆ ಹಣ್ಣು ಮತ್ತು ದ್ರಾಕ್ಷಿ ಹೇರಳವಾಗಿ ಸಿಕ್ಕುತ್ತಿದ್ದುವು. ಅಲ್ಲದೆ ಸ್ಥಳದಲ್ಲಿಯೇ ಬೆಳೆದ ಬಗೆ ಬಗೆಯ ತರಕಾರಿಗಳೂ ಹಾಲೂ ಸಮೃದ್ಧವಾಗಿ ದೊರೆಯುತ್ತಿದ್ದವು. ದಿಂಡಿಗಲ್ ನಿಜಕ್ಕೂ ಅಜ್ಜನಿಗೆ ಲಾಯಕ್ಕಾದ ಸ್ಥಳ. ಏಕೆಂದರೆ ಡಾಕ್ಟರ್ ಅಜ್ಜನಿಗೆ ಬೇಕಾದಷ್ಟು ತರಕಾರಿಗಳನ್ನು ತಿನ್ನುವಂತೆ ಹಾಲು ಕುಡಿಯುವಂತೆ ಶಿಫಾರಸು ಮಾಡಿದ್ದರು.

ಮನೆ ಹಳೆಯ ಕಾಲದ್ದು. ಬೇಕಾದಷ್ಟು ಕೋಣೆಗಳಿದ್ದುವು. ವಿಶಾಲವಾದ ತೋಟ, ಹಸುಕರುಗಳನ್ನು ಕಟ್ಟಲು ಕೊಟ್ಟಿಗೆ, ಸಿಹಿನೀರಿನ ಬಾವಿ, ಇವೆಲ್ಲವೂ ಇದ್ದುವು. ಹಳ್ಳಿಯ ಜೀವನ ಸವಿದಿದ್ದ ಅಜ್ಜಿ ಒಂದು ಹಸುವನ್ನು ತಂದು ಮನೆಯಲ್ಲಿ ಸಾಕಲು ನಿರ್ಧರಿಸಿದ್ದಳು. ನಮಗೆಲ್ಲ ಬಾವಿಯಿಂದ ನೀರನ್ನು ಹೇಗೆ ಸೇದಬೇಕೆಂಬುದನ್ನು ತೋರಿಸಿ ಕೊಡುವುದಾಗಿ ಹೇಳುತ್ತಿದ್ದಳು.

"ಇಷ್ಟೇ ಅಲ್ಲ; ಹಸುವಿನಿಂದ ಹಾಲನ್ನು ಹೇಗೆ ಕರೆಯಬಹುದು ಎಂಬುದನ್ನು ಸಹ ನಿಮಗೆಲ್ಲ ಕಲಿಸುತ್ತೇನೆ" ಎಂದು ಹೇಳಿ ನಕ್ಕಿದ್ದುಂಟು.

ತಮ್ಮ ನೆರೆಹೊರೆಯವರು ನಮಗೆ ರಾತ್ರಿ ಹೊತ್ತು ಹುಷಾರಾಗಿರಬೇಕೆಂದು ಎಚ್ಚರವಿತ್ತರು. ನಮ್ಮ ಎಲ್ಲ ಬಾಗಿಲುಗಳು, ಕಿಟಕಿಗಳನ್ನು ಭದ್ರವಾಗಿ ಮುಚ್ಚಿರಬೇಕೆಂದೂ ಸ್ವಲ್ಪ ಸಮಯದಿಂದ ಊರಿನಲ್ಲಿ ಕಳ್ಳರ ತಂಡವೊಂದು ಹಾವಳಿ ಮಾಡುತ್ತಿದೆಯೆಂದೂ ಹೇಳಿದ್ದರು. ಪೋಲಿಸಿನವರು ಎಷ್ಟೇ ಪ್ರಯತ್ನ ಪಟ್ಟಾಗ್ಯೂ ಕಳ್ಳರನ್ನು ಹಿಡಿಯಲು ಅಸಮರ್ಥರಾಗಿದ್ದರಂತೆ.

ನಮ್ಮ ಮನೆಯ ಬಾಗಿಲುಗಳಿಗೆ ಭಾರಿ ಭಾರಿ ಕಬ್ಬಿಣದ ಅಗಳಿಗಳಿದ್ದವು. ಕಿಟಕಿಗಳಿಗೆ ಕಬ್ಬಿಣದ ಸಲಾಕಿಗಳನ್ನು ಜೋಡಿಸಿದ್ದರು. ಒಂದು ಕೋಣೆಯಲ್ಲಿ ಬೆಲೆಬಾಳುವ ಆಭರಣಗಳು, ಹಣಕಾಸನ್ನು ಜೋಪಾನವಾಗಿಡಲು ಗೋಡೆಯೊಳಗೆ ಒಂದು ಪುಟ್ಟ ಅಲಮಾರನ್ನು ಜೋಡಿಸಿದ್ದರು.

"ಈ ಕಬ್ಬಿಣದ ಅಲಮಾರನ್ನು ಯಾವ ಕಳ್ಳ ತಾನೆ ಮುರಿದು ಹಾಕಬಲ್ಲ?" ಎಂದು ಅಜ್ಜ ಸವಾಲೆಸೆದರು.

ಒಂದು ರಾತ್ರಿ ನಾವೆಲ್ಲ ಗಾಢವಾದ ನಿದ್ದೆ ಮಾಡುತ್ತಿದ್ದೆವು. ಆ ಸಮಯದಲ್ಲಿಯೇ ಕಳ್ಳರು ಪ್ರತ್ಯಕ್ಷ! ಅವರು



ಸಾಮಾನ್ಯ ಕಳ್ಳರಲ್ಲ. ಅವರಲ್ಲಿ ಚೂರಿ, ಚಾಕು, ದೊಣ್ಣೆಗಳು ಇದ್ದುವು. ಅವರು ಮನೆಯೊಳಗೆ ನುಗ್ಗಿ ಬರಲು ಬಾಗಿಲು, ಕಿಟಿಕಿಗಳನ್ನು ಮುರಿಯಲಿಲ್ಲ. ಅವರು ಗೋಡೆಗೆ ಕನ್ನ ಹಾಕಿ ಆ ದೊಡ್ಡ ತೂತಿನೊಳಗಿಂದ ನುಗ್ಗಿ ಬಂದಿದ್ದರು.

ನಮ್ಮ ಪಕ್ಕದ ಮನೆಯವರೇನೋ ಒಂದೊಂದು ಕೋಣೆಗೆ ಸೇರಿದ ಎಲ್ಲಾ ಬಾಗಿಲುಗಳು, ಕಿಟಿಕಿಗಳನ್ನು ಭದ್ರವಾಗಿ ಮುಚ್ಚಿರುವಂತೆ, ಹೊರಗಡೆಯ ಕೋಣೆಗಳಲ್ಲಿ ಮಲಗಬಾರದೆಂದು ಹೇಳಿದ್ದರು. ಆದರೆ ಅಜ್ಜ ಅವರ ಸಲಹೆಯನ್ನು ಅನುಸರಿಸಿರಲಿಲ್ಲ. ಹೀಗಾಗಿ ಕಳ್ಳರು ಸೀದಾ ಅಜ್ಜ ಮಲಗಿದ್ದ ಕೋಣೆಗೇ ನುಗ್ಗಿದರು.

ಅಜಾನುಬಾಹು, ಮೈಯೆಲ್ಲಾ ಕಪ್ಪು, ನೀಳವಾಗಿ ಬಿಟ್ಟಿದ್ದ ಕಪ್ಪು ಕೂದಲು. ಇವನು ಕಳ್ಳರ ತಂಡದ ನಾಯಕ. ಅವನು ಅಜ್ಜನನ್ನು ಹಾಸಿಗೆಯಿಂದ ದರದರ ಎಳೆದು ಆಭರಣಗಳು, ಹಣಕಾಸು ಎಲ್ಲಿಟ್ಟಿದ್ದೀರಾ ಎಂದು ಗದರಿಸಿ ಕೇಳಿದ. ಅಜ್ಜನು ಉತ್ತರ ಕೊಡಲು ನಿರಾಕರಿಸಿದಾಗ, ಕಳ್ಳರ ಪೈಕಿ ಒಬ್ಬ ಅಜ್ಜನಿಗೆ ದೊಣ್ಣೆಯಿಂದ ಬಡಿದ. ಅಜ್ಜ ನೆಲದ ಮೇಲೆ ಬಿದ್ದು ಬಿಟ್ಟರು.

ಅಜ್ಜಿ ಶಾಂತಳಾಗಿ "ಬನ್ನಿ, ಅವೆಲ್ಲ ಎಲ್ಲಿದೆ ಎಂಬೋದನ್ನು ನಾನೇ ತೋರಿಸ್ತೇನೆ" ಎಂದಳು.

ಆ ಸಮಯದಲ್ಲಿ ನಮ್ಮಪ್ಪ ಅಲ್ಲಿಗೆ ಬಂದು ಕಳ್ಳನೊಬ್ಬನನ್ನು ಹಿಡಿಯಲು ಹೋದ. ಅಜ್ಜಿ ಆ ಕಡೆ ತಳ್ಳಿಬಿಟ್ಟಳು.

"ತೆಪ್ಪಗಿರು. ಪ್ರಯೋಜನವಿಲ್ಲ. ಅವರು ನಿನ್ನನ್ನು ತಿವಿದು ಸಾಯಿಸುತ್ತಾರೆ. ನೀನು ನಿಮ್ಮಪ್ಪನನ್ನು ನೋಡಿಕೋ" ಎಂದಳು ಅಜ್ಜಿ.

ಅವಳು ಕಳ್ಳರನ್ನು ಅಲಮಾರಿದ್ದ ಕೋಣೆಗೆ ಕರೆದುಕೊಂಡು ಹೋಗಿ ಅವರಿಗೆ ಬೀಗದ ಕೈಗಳನ್ನು ಒಪ್ಪಿಸಿದಳು.

"ನಿಮಗೇನು ಬೇಕೋ ತೆಗೆದುಕೊಳ್ಳಿ. ಆದರೆ ನಮಗಾರಿಗೂ ಅಪಾಯ ಮಾಡಬೇಡಿ" ಎಂದಳು.

ಕಳ್ಳರಿಗೆ ನಮ್ಮ ಅಜ್ಜಿ, ಅಮ್ಮ ಹಾಕಿಕೊಂಡಿದ್ದ ಆಭರಣಗಳು ಬೇಕಾಗಿದ್ದುವು. ಆದರೆ ಅವರಿಬ್ಬರ ಮದುವೆ ಸಮಯದ ಚಿನ್ನದ ಸರಗಳನ್ನು ಮಾತ್ರ ಕಳ್ಳರು ಕಿತ್ತುಕೊಳ್ಳದೆ ಹಾಗೆಯೇ ಬಿಟ್ಟರು.

"ಸರಿ. ನೀನು ಇಲ್ಲಿಂದ ಹೊರಗೆ ಹೋಗು" ಎಂದು ಕಳ್ಳರು ಅಜ್ಜಿಯನ್ನು ಗದರಿಸಿದರು.

ಅಜ್ಜಿ ತುಂಬಾ ಜಾಣೆ. ಕಳ್ಳರು ಅಲಮಾರಿನಿಂದ ಹೊರ ತೆಗೆದ ಚಿನ್ನದ ಆಭರಣಗಳನ್ನು ನೋಡಿ ಆನಂದಿಸುತ್ತಿದ್ದಾಗ ಅಜ್ಜಿ ಕೋಣೆಯ ಹೊರಗೆ ಹೋಗಿ ಬಾಗಿಲು ಹಾಕಿ ಅಗಳಿ ಹಾಕಿದಾಗ ಒಳಗೆ ಹೋದವರು ಹೊರಗಡೆ ಬರಲು ಸಾಧ್ಯವೇ ಇರಲಿಲ್ಲ. ಅಲ್ಲದೆ ಬಾಗಿಲನ್ನು ಒಡೆಯವುದು ಅಷ್ಟು ಸುಲಭವೂ ಆಗಿರಲಿಲ್ಲ.

ಒಳಗಡೆ ಸಿಕ್ಕಿಕೊಂಡ ಕಳ್ಳರು ಕೂಗಿದರು, ಕಿರುಚಿದರು. ಹಿಡಿ ಹಿಡಿ ಶಾಪ ಹಾಕಿದರು. ಕೆಟ್ಟ ಮಾತುಗಳನ್ನು ಪ್ರಯೋಗಿಸಿದರು. ಬಾಗಿಲು ಬಡಿದರು. ಅಜ್ಜಿ ನಗತೊಡಗಿದಳು. ನಮ್ಮಪ್ಪನನ್ನು ಕೂಗಿ ಹೇಳಿದಳು. "ಲೋ, ಓಡಿ ಹೋಗಿ ಪೋಲೀಸರನ್ನು ಡಾಕ್ಟರರನ್ನು ಕರೆದುಕೊಂಡು ಬಾ. ಬೇಗ, ಓಡು. ಮಕ್ಕಳೆ, ನೀವು ಹೊರ ಅಂಗಳಕ್ಕೆ ಹೋಗಿ, 'ಕಳ್ಳರು ಸಿಕ್ಕಿಬಿದ್ದಿದ್ದಾರೆ' ಅಂತ ಗಟ್ಟಿಯಾಗಿ ಕೂಗಿ. ಅಕ್ಕ ಪಕ್ಕದ ಮನೆಯವರಿಗೆಲ್ಲಾ ತಿಳಿಸಿ, ನಾವು ಕಳ್ಳರನ್ನು ಹಿಡಿದಿದ್ದೇವೆ ಎಂದು"

ನಾವು ಹೆದರಿಕೆಯಿಂದ ಅಳತೊಡಗಿದೆವು. ನಡುಕ ಹುಟ್ಟಿತು.

"ಹೆದರಬೇಡಿ. ಕಳ್ಳರಿಂದ ನಿಮಗೆ ಯಾವ ಅಪಾಯವೂ ಇಲ್ಲ. ಧೈರ್ಯವಾಗಿರಿ. ನಾನು ಹೇಳಿದಂತೆ ಮಾಡಿ" ಎಂದು ಸಮಾಧಾನ ಮಾಡಿದಳು.

ಆಗಿನ ಕಾಲದಲ್ಲಿ ಆ ಊರಿನಲ್ಲಿ ಟೆಲಿಫೋನ್ ಸೌಕರ್ಯವಿರಲಿಲ್ಲ. ನಮ್ಮಪ್ಪ ಕಾರಿನಲ್ಲಿ ಪೋಲೀಸ್ ಸ್ಟೇಷನ್ನಿಗೆ ಹೋದರು. ನಮ್ಮ ಮನೆಯಲ್ಲಿನ ಗಲಾಟೆ, ಕೂಗನ್ನು ಕೇಳಿಸಿಕೊಂಡ ಅಕ್ಕಪಕ್ಕದ ಮನೆಯವರು ನಮ್ಮ ಮನೆಗೆ ಓಡಿ ಬಂದರು.

ಅಜ್ಜಿ ಮತ್ತು ನಮ್ಮಮ್ಮ ಅಜ್ಜನ ಗಾಯವನ್ನು ತೊಳೆದು ಪಟ್ಟಿ ಕಟ್ಟಿದರು.

ಅದೊಂದು ಆಳವಾದ ಗಾಯ. ನಾನು ಅಷ್ಟೊಂದು ರಕ್ತವನ್ನು ನೋಡಿದ್ದು ಇದೇ ಮೊದಲನೆಯ ಸಲ. ನನಗೆ ತಲೆಸುತ್ತುವಂತಾಯಿತು.

ಪೋಲೀಸರು, ಡಾಕ್ಟರ್ ಬಂದರು. ಕಳ್ಳರಿಗೆ ಬೇಡಿತೊಡಿಸಿ ಒಯ್ದರು. ಊರಿನಲ್ಲಿ ಹಾಗೂ ಸುತ್ತಮುತ್ತ ಹಳ್ಳಿಗಳಲ್ಲಿ ಉಪದ್ರವಕಾರಿಯಾಗಿದ್ದ ಈ ತಂಡವನ್ನು ಕೊನೆಗೂ ಹಿಡಿದರಲ್ಲ ಎಂದು ಪ್ರತಿಯೊಬ್ಬರಿಗೂ ಸಂತೋಷ.

"ವೃದ್ಧೆಯೊಬ್ಬಳು ಪೋಲಿಸರ ಕೈಯ್ಯಲ್ಲೂ ಸಾಧ್ಯವಾಗದೆ ಹೋದುದನ್ನು ಮಾಡಿ ತೋರಿಸಿದ್ದಾಳೆ. ಕಳ್ಳರನ್ನು ಒಬ್ಬಂಟಿಯಾಗಿ ಹಿಡಿದಿದ್ದಾಳೆಂಬುದನ್ನು ಊಹಿಸಲು ಸಾಧ್ಯವಿಲ್ಲ" ಎಂದು ಜನರು ಹೇಳುತ್ತಿದ್ದರು.



ಅಜ್ಜಿಗೆ ನಗದು ಬಹುಮಾನ ಕೊಟ್ಟರು. ಅವಳು ಅದನ್ನು ಅಜ್ಜನ ಚಿಕಿತ್ಸೆಗಾಗಿ ಸೇರಿಸಿದ್ದ ಆಸ್ಪತ್ರೆಗೆ ಕೊಟ್ಟಳು. ಅಜ್ಜ ಆಸ್ಪತ್ರೆಯಲ್ಲಿ ಒಂದು ತಿಂಗಳು ಇರಬೇಕಾಯಿತು. ಅವರು ಅಲ್ಲಿಂದ ಮನೆಗೆ ವಾಪಸ್ಸಾದ ಮೇಲೆ ಎಲ್ಲರಿಗೂ ತನಗಾದ ಗಾಯದ ಕಲೆಯನ್ನು ಜಂಬದಿಂದ ತೋರಿಸುತ್ತಿದ್ದರು.

ಕಳ್ಳರಿಂದ ನಮ್ಮನ್ನು ರಕ್ಷಿಸುವಾಗ ತಮಗೆ ಈ ಗಾಯವಾಯಿತೆಂದೇ ಅಜ್ಜ ಎಲ್ಲರಿಗೂ ಹೇಳುತ್ತಿದ್ದರು. ಅಜ್ಜಿ ಮಾತ್ರ ತೆಪ್ಪಗಿರುತ್ತಿದ್ದಳು. ಆದರೆ ಆ ಸುಕ್ಕಿದ ಮುಖದ ಮಾತ್ರ ತುಂಟ ನಗೆ ಕಾಣಿಸುತ್ತಿತ್ತು.

## ಚಟುವಟಿಕೆಗಳು

### ❑ ಮಂಡಿಸಿರಿ

- ನೀವು ಕತೆಯನ್ನು ಓದಿದಿರಲ್ಲವೇ? ಇದರಲ್ಲಿ ನಿಮಗೆ ಇಷ್ಟವಾದ ಸನ್ನಿವೇಶ ಯಾವುದು? ಅದನ್ನು ತರಗತಿಯಲ್ಲಿ ಮಂಡಿಸಿರಿ.

### ❑ ಚರ್ಚಿಸಿರಿ

- ನಿಮ್ಮ ಮನೆಗೆ ಕಳ್ಳರು ಬಂದರೆ ನೀವೇನು ಮಾಡುವಿರಿ? ನಿಮ್ಮ ಅಭಿಪ್ರಾಯಗಳನ್ನು ತಿಳಿಸಿರಿ.

### ❑ ಉತ್ತರ ಬರೆಯಿರಿ

- ಅಜ್ಜ ದಿಂಡಿಗಲ್‌ನಲ್ಲಿ ನೆಲೆಸಲು ಕಾರಣಗಳೇನು?
- ದಿಂಡಿಗಲ್‌ನಲ್ಲಿರುವ ಅಜ್ಜಿ ನೆಲೆಸುವ ಮನೆ ಹೇಗಿತ್ತು?
- ಕಳ್ಳರನ್ನು ಬಂಧಿಸಲು ಅಜ್ಜಿ ಮಾಡಿದ ಉಪಾಯವೇನು?

### ❑ ಸಂದರ್ಭ ತಿಳಿಸಿರಿ

ಕೆಳಗಿನ ಮಾತುಗಳನ್ನು ಯಾರು, ಯಾರಿಗೆ, ಯಾವಾಗ ಹೇಳಿದರು?

- ತೆಪ್ಪಗಿರು, ಪ್ರಯೋಜನವಿಲ್ಲ. ಅವರು ನಿನ್ನನ್ನು ತಿವಿದು ಸಾಯಿಸುತ್ತಾರೆ. ನೀನು ನಿಮ್ಮಪ್ಪನನ್ನು ನೋಡಿಕೋ.
- ಸರಿ, ನೀನು ಇಲ್ಲಿಂದ ಹೊರಗೆ ಹೋಗು.
- "ವೃದ್ಧೆಯೊಬ್ಬಳು, ಪೋಲೀಸರ ಕೈಯಲ್ಲಿ ಸಾಧ್ಯವಾಗದೇ ಹೋದುದನ್ನು ಮಾಡಿ ತೋರಿಸಿದ್ದಾಳೆ."

### ❑ ಟಿಪ್ಪಣಿ ಬರೆಯಿರಿ

ಮೇಲಿನ ಕತೆಗೆ ಸಂಬಂಧಿಸಿದ ನೀತಿಯನ್ನು ತಿಳಿಸುವ ಗಾದೆ ಮಾತೊಂದು ಕೆಳಗಿನ ಕೋಣೆಯಲ್ಲಿ ಇದೆ. ಅದನ್ನು ಕಂಡುಹಿಡಿದು ಬರೆಯಿರಿ. ಬಳಿಕ ಆ ಗಾದೆಮಾತಿಗೆ ಕತೆಯ ಆಧಾರದಲ್ಲಿ ಟಿಪ್ಪಣಿ ಬರೆಯಿರಿ.

ಮನಸ್ಸಿದ್ದರೆ ಮಾರ್ಗವಿದೆ
ತುಂಬಿದ ಕೊಡ ತುಳುಕುವುದಿಲ್ಲ
ಉಪಾಯವಿದ್ದರೆ ಅಪಾಯವಿಲ್ಲ
ತಾಳಿದವನು ಬಾಳಿಯನು

### ❑ ಪತ್ರ ಬರೆಯಿರಿ

ಅಜ್ಜಿಯು ಉಪಾಯದಿಂದ ಕಳ್ಳರನ್ನು ಹಿಡಿದ ವಿಚಾರ ಓದಿ ನೀವು ಸಂತಸಪಟ್ಟಿರುವಿರಲ್ಲವೇ? ಅಂದು

ರಾತ್ರಿ ಆ ಮನೆಯಲ್ಲಿ ನಡೆದ ಘಟನೆಯನ್ನು ಅಜ್ಜನ ಮೊಮ್ಮಗಳು ಮದರಾಸಿನಲ್ಲಿದ್ದ ಚಿಕ್ಕಪ್ಪನಿಗೆ ತಿಳಿಸಲು ಪತ್ರ ಬರೆಯತೊಡಗಿದಳು. ಅವಳು ಹೇಗೆ ಬರೆದಿರಬಹುದು ಎಂದು ಊಹಿಸಿ ನೀವೂ ಒಂದು ಪತ್ರ ಬರೆಯಿರಿ.

### ❑ ಜೊತೆಗೊಳಿಸಿರಿ

- ಗಾದೆಗಳಿಗೆ ಎರಡು ರೀತಿಯ ಅರ್ಥಗಳಿವೆ. ಒಂದು ಅದು ನೇರವಾಗಿ ನೀಡುವ ಅರ್ಥ. ಇನ್ನೊಂದು ಅದು ಸೂಚಿಸುವ ಅರ್ಥ. ಕೆಳಗೆ ಗಾದೆಮಾತುಗಳನ್ನು ಅವುಗಳ ಸೂಚ್ಯಾರ್ಥಗಳನ್ನು ಕೊಡಲಾಗಿದೆ. ಆಯಾ ಗಾದೆಮಾತಿಗೆ ಯೋಗ್ಯವಾದ ಸೂಚ್ಯಾರ್ಥವನ್ನು ಜೊತೆಗೊಳಿಸಿ ಬರೆಯಿರಿ.

| ಗಾದೆ ಮಾತುಗಳು | ಸೂಚ್ಯಾರ್ಥಗಳು |
|---|---|
| • ಅಗ್ಗದ ಆಸೆಗೆ ಮುಗ್ಗಿದ ಜೋಳ | • ತಿಳಿದವರು ಜಂಭ ಪಡುವುದಿಲ್ಲ |
| • ಆಳ ನೋಡಿ ಹಾರು | • ಸೌಂದರ್ಯಕ್ಕಿಂತ ಗುಣ ಮುಖ್ಯ |
| • ತಾಳಿದವನು ಬಾಳಿಯಾನು | • ಕಡಿಮೆ ಬೆಲೆಗೆ ದೊರೆಯುವ ವಸ್ತು ನಿಷ್ಪ್ರಯೋಜಕ |
| • ತುಂಬಿದ ಕೊಡ ತುಳುಕುವುದಿಲ್ಲ | • ಸಂಪತ್ತು ಪರಿಶ್ರಮದಿಂದ ಬರುತ್ತದೆ |
| • ದುಡಿತವೆ ದುಡ್ಡಿನ ತಾಯಿ | • ಯಾವ ಕಾರ್ಯವನ್ನಾದರೂ ಯೋಚಿಸಿ ಮಾಡಬೇಕು. |
| • ಕಬ್ಬು ಡೊಂಕಾದರೆ ಸಿಹಿ ಡೊಂಕೇ? | • ತಾಳ್ಮೆ ಇದ್ದರೆ ಯಾವುದೇ ಕಷ್ಟ ಬಂದರೂ ಎದುರಿಸಬಹುದು. |

### ❑ ಲೇಖನ ಚಿಹ್ನೆ ಸೇರಿಸಿ ಬರೆಯಿರಿ

ಕೆಳಗಿನ ಗದ್ಯಭಾಗವನ್ನು ಓದಿರಿ.

> ತನ್ನ ತಲೆಯ ಮೇಲಿರುವ ಕುದುರೆ ಮೊಟ್ಟೆಯನ್ನು ಎರಡು ಕೈಗಳಿಂದಲೂ ಗಟ್ಟಿಯಾಗಿ ಹಿಡಿದುಕೊಂಡು ಆನಂದದಿಂದ ತಲೆದೂಗುತ್ತಾ ಮುಟ್ಠಾಳನು ಆಹಾ ನಮ್ಮ ಹಿರಿಯರ ಪುಣ್ಯ ಗುರುಗಳ ತಪಸ್ಸಿನ ಶಕ್ತಿ ಅಗಾಧವಾದುದು ಹಾಗಿಲ್ಲದಿದ್ದರೆ ಇಷ್ಟು ಕಡಿಮೆ ಕ್ರಯಕ್ಕೆ ನಮಗೆ ಉಚ್ಚ ಜಾತಿಯ ಕುದುರೆ ಮೊಟ್ಟೆ ಸಿಗುತ್ತಿತ್ತೆ ಎನ್ನಲು ಮಂಕನು ಅದಕ್ಕೆ ಸಂಶಯವೇಕೆ ತೋಡಿದ ಬಾವಿಗೆ ನೀರೇ ಸಾಕ್ಷಿ ಎಂಬುದನ್ನು ನೀನು ಕೇಳಲಿಲ್ಲವೆ ಎಂದನು.

ಮೇಲಿನ ಗದ್ಯಭಾಗದಲ್ಲಿರುವ ದೋಷಗಳೇನೆಂದು ತಿಳಿಯಿತೆ? ಎಲ್ಲೂ ಲೇಖನ ಚಿಹ್ನೆಗಳನ್ನು ಬಳಸಲಿಲ್ಲ ಅಲ್ಲವೇ? ನೀವು ಇನ್ನೊಮ್ಮೆ ಓದಿ. ಸೂಕ್ತವಾದ ಲೇಖನ ಚಿಹ್ನೆಗಳನ್ನು ಸೇರಿಸಿ ಬರೆಯಿರಿ.

## ವಿದ್ಯಾರ್ಥಿಗಳು ಗಳಿಸುವ ಕಲಿಕಾ ಸಾಮರ್ಥ್ಯಗಳು

- ಆಲಿಸಿದ ವಿಚಾರಗಳನ್ನು ತಾರ್ಕಿಕವಾಗಿ ವಿಶ್ಲೇಷಿಸಿ ಅಭಿಪ್ರಾಯವನ್ನು ಮೌಖಿಕವಾಗಿ ಪ್ರಕಟಿಸುವುದು.
- ಭಾಷಾ ಘಟಕಗಳಾದ ಪದಗಳು, ನುಡಿಗಟ್ಟುಗಳು ಗಾದೆಗಳು ಇತ್ಯಾದಿಗಳನ್ನು ಸಂದರ್ಭಾನುಸಾರ ಉಪಯೋಗಿಸಿಕೊಂಡು ಮಾತನಾಡುವುದು.
- ರಾಗ, ತಾಳ, ಭಾವದೊಂದಿಗೆ ಮಂಡಿಸಿದ ಕವಿತೆಗಳನ್ನು ಆಲಿಸಿ ಆಸ್ವಾದಿಸುವುದು.
- ಗದ್ಯ, ಪದ್ಯವನ್ನು ಭಾವಪೂರ್ಣವಾಗಿ ಉಚ್ಚಾರಣ ಶುದ್ಧಿಯೊಂದಿಗೆ ನಿರರ್ಗಳವಾಗಿ ಓದುವುದು.
- ಪ್ರಚಲಿತ ವಿದ್ಯಮಾನಗಳನ್ನು ವಾಚನ ಸಾಮಗ್ರಿಗಳ ಸಹಾಯದಿಂದ ಪರಿಶೀಲಿಸಿ ಸ್ವಂತ ರಚನೆಗಳನ್ನು ಉತ್ತಮಪಡಿಸುವುದು.
- ಸ್ವಂತ ಆಸಕ್ತಿಯಿಂದ ಪುಸ್ತಕ ಮತ್ತು ಇತರ ವಾಚನ ಸಾಮಗ್ರಿಗಳನ್ನು ಕಂಡುಕೊಂಡು ಓದುವುದು.
- ವಾಚನಾನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ದಿನಚರಿ, ಆತ್ಮಕಥೆ, ಅನುಭವ ಟಿಪ್ಪಣಿ, ಜೀವನ ಚರಿತ್ರೆ ಮೊದಲಾದ ಲೇಖನಗಳನ್ನು ಓದಿ ಸ್ವಂತ ಅನುಭವಗಳನ್ನು ಸೇರಿಸಿ ಸ್ವಯಂ ರಚನೆ ಮಾಡುವುದು.
- ಸಂದರ್ಭಾನುಸಾರ ವಿಭಿನ್ನ ವ್ಯವಹಾರ ರೂಪಗಳನ್ನು ಆಯ್ದು ರಚನೆಗಳಲ್ಲಿ ತೊಡಗುವುದು. ಮತ್ತು ಇನ್ನೊಂದು ವ್ಯವಹಾರ ರೂಪಕ್ಕೆ ಬದಲಾಯಿಸುವುದು.
- ವಿಭಿನ್ನ ಭಾಷಾನುಭವಗಳನ್ನು ಗಳಿಸಿ ಪದಗಳ ಪ್ರಯೋಗಗಳೇ ಮೊದಲಾದವುಗಳನ್ನು ಬಳಸಿಕೊಂಡು ರಚನೆಗಳನ್ನು ಮಾಡುವುದು.
- ತನ್ನ ಮತ್ತು ಇತರರ ರಚನೆಗಳ ಮೌಲ್ಯ ನಿರ್ಣಯಿಸುವ ವಿವಿಧ ರೀತಿಗಳನ್ನು ಕಂಡುಕೊಳ್ಳುವುದು.
- ತನ್ನ ಮತ್ತು ಇತರರ ರಚನೆಗಳನ್ನು ಹೋಲಿಸಿ ತನ್ನ ರಚನೆಗಳನ್ನು ಉತ್ತಮ ಪಡಿಸುವುದು.
- ಕತೆ, ಕವಿತೆ, ಲೇಖನಗಳಲ್ಲಿ ಸಂದರ್ಭಾನುಸಾರ ಲೇಖನ ಚಿಹ್ನೆಗಳನ್ನು ಬಳಸುವುದು.
- ರಾಗ, ತಾಳ, ಭಾವಗಳಿಂದ ಕವಿತೆಗಳನ್ನು ಹಾಡುವುದು.
- ಸೃಜನಾತ್ಮಕ ರಚನೆಗಳ ವಿಷಯಗಳನ್ನು ಸಂಗ್ರಹಿಸಿ ಬರೆಯುವುದು.

# ಅರ್ಥಕೋಶ

**ಅ**

ಅಚ್ಚುಗಾಲಿ – ಚಿನ್ನದ ಗಟ್ಟಿಯನ್ನು ಬೇಕಾದ ಆಕಾರಕ್ಕೆ ತರುವ ಯಂತ್ರ

ಅಮೂಲ್ಯ – ಬೆಲೆ ಕಟ್ಟಲಾಗದ

ಅರಸು – ಹುಡುಕು

ಅವಯವ – ಅಂಗ, ಶರೀರದ ಭಾಗ

ಅವಸಾನ – ಕೊನೆ

**ಉ**

ಉಕ್ಕೇರು – ಹೊಮ್ಮಿಬರು, ಮೇಲೇರು

**ಋ**

ಋಣ – ಸಾಲ, ಹಂಗು

**ಒ**

ಒಕ್ಕಲು – ಬೇಸಾಯಗಾರ

ಒಕ್ಕೊರಲು – ಒಂದೇ ಸ್ವರ

ಒಗ್ಗು – ಹೊಂದಿಕೊಳ್ಳು

**ಕ**

ಕದ – ಬಾಗಿಲು

ಕಳೆ – ಕಾಂತಿ, ಶೋಭೆ

ಕಾಲ – ಯಮ, ಸಮಯ

**ಖ**

ಖಾತರಿ – ದೃಢ

**ಗ**

ಗುಂಗು – ತನ್ಮಯತೆ, ಗೀಳು

ಗುರುಕುಲ – ಪ್ರಾಚೀನ ಪದ್ಧತಿಯ ಪಾಠಶಾಲೆ

ಗೇಣಿ – ಗುತ್ತಿಗೆ

**ಘ**

ಘನ – ಮಹತ್ವವುಳ್ಳ, ಅತ್ಯಧಿಕವಾದ

**ಚ**

ಚಣ – ಕ್ಷಣ

ಚಿಕ್ಕಿ – ನಕ್ಷತ್ರ

**ತ**

ತಂಗುಳು – ಹಿಂದಿನ ದಿನದ ಅನ್ನ, ತಣ್ಣಗಾದ ಅನ್ನ

ತಕ್ಷಣ – ಕೂಡಲೇ

ತಳಮಳ – ಕಳವಳ

ತಾಡಪತ್ರ – ತಾಳೆಎಲೆ

ತೃಪ್ತಿ – ಸಮಾಧಾನ

**ದ**

ದಣಿವು – ಆಯಾಸ

### ನ

ನಯನ – ಕಣ್ಣು

ನಾಕು – ನಾಲ್ಕು

ನಿಘಂಟು – ಅರ್ಥಕೋಶ

ನಿರಾಶೆ – ಆಶೆಯನ್ನು ಕಳೆದುಕೊಳ್ಳುವಿಕೆ, ಹತಾಶೆ

ನಿರುದ್ಯೋಗಿ – ಉದ್ಯೋಗವಿಲ್ಲದವನು

ನಿರೋಗಿ – ರೋಗವಿಲ್ಲದವ, ಆರೋಗ್ಯವಂತ

ನಿರ್ಧಾರ – ತೀರ್ಮಾನ

ನಿಷಿದ್ಧ – ನಿಷೇಧಿಸಲ್ಪಟ್ಟ, ನಿರಾಕರಿಸಿದ

### ಪ

ಪತ್ರ – ಎಲೆ

ಪರಿಶ್ರಮ – ಪ್ರಯತ್ನ, ದುಡಿಮೆ

ಪಾಳು – ಹಾಳು

ಪ್ರವಚನ – ವಿವರಣೆ, ವ್ಯಾಖ್ಯಾನ

### ಬ

ಬಂಡವಾಳ – ಮೂಲಧನ

ಬಳುವಳಿ – ಉಡುಗೊರೆ

ಬಾಳು – ಜೀವನ

ಬೆಸಸು – ಹೇಳು, ಆಜ್ಞಾಪಿಸು

### ಭ

ಭೋಗಿ – ಸುಖವನ್ನು ಅನುಭವಿಸುವವ

### ಮ

ಮರುಕಳಿಸು – ಮತ್ತೆ ಬರು, ಪುನರಾವರ್ತನೆಗೊಳ್ಳು

ಮೂಕ – ಮಾತು ಬಾರದವ

ಮೈಕೊಡವು – ಆಲಸ್ಯವನ್ನು ಬಿಡು

ಮೊಗ – ಮುಖ

### ಯ

ಯೋಗ್ಯ – ಸೂಕ್ತ

ಯೋಗ್ಯತೆ – ಅರ್ಹತೆ

### ಲ

ಲತೆ – ಬಳ್ಳಿ

ಲತಾಮಂಟಪ – ಬಳ್ಳಿ ಹಬ್ಬಿರುವ ಮಂಟಪ

### ವ

ವಾತ್ಸಲ್ಯ – ಹಿರಿಯರಿಗೆ ಕಿರಿಯರ ಮೇಲಿರುವ ಪ್ರೀತಿ

ವೃಥಾ – ವ್ಯರ್ಥ, ಸುಮ್ಮನೆ

ವೃದ್ಧ – ಮುದುಕ

ವೃದ್ಧಿ – ಹೆಚ್ಚಳ

### ಸ

ಸಂದೇಹ – ಸಂಶಯ

ಸುಮಲತೆ – ಹೂಬಳ್ಳಿ

ಸ್ವಚ್ಛಂದ – ಮನಬಂದಂತೆ